ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಗುರುವಾರ, ಸೆಪ್ಟೆಂಬರ್ 28, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 136 RNI : 27369/75

janathavani@mac.com
www.janathavani.com
☎ 08192 254736 91642 99999

## ಕಾವೇರಿ: ಸಿಎಂ-ಡಿಸಿಎಂ ಭಿನ್ನ ನಿಲುವು



**ಆಕ್ಷೇಪಣೆ ಎಂದ ಸಿದ್ದರಾಮಯ್ಯ**

**3 ಸಾವಿರ ಕ್ಯೂಸೆಕ್ಸ್ ಹರಿಸುವ ಪರ ಡಿ.ಕೆ. ಶಿವಕುಮಾರ್**

ಬೆಂಗಳೂರು, ಸೆ.27 - ತಮಿಳುನಾಡಿಗೆ ಕಾವೇರಿ ನೀರು ಹರಿಸುವ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಿನ್ನ ನಿಲುವು ಹೊಂದಿದ್ದಾರೆ.

ಕಾವೇರಿ ನೀರು ನಿಯಂತ್ರಣ ಸಮಿತಿಯು 3000 ಕ್ಯೂಸೆಕ್ಸ್ ನೀರನ್ನು ಹರಿಸಲು ಆದೇಶಿಸಿದೆ. ಈ ಬಗ್ಗೆ ಕಾನೂನು ತಂಡದೊಂದಿಗೆ ಚರ್ಚಿಸಿದ್ದು, ಮೇಲಿನ ಪ್ರಾಧಿಕಾರದ ಮುಂದೆ ಆಕ್ಷೇಪಣೆ ಸಲ್ಲಿಸುವುದಾಗಿ ಮುಖ್ಯಮಂತ್ರಿ ಅವರು ತಿಳಿಸಿದ್ದಾರೆ.

ಹನೂರು ಸಮೀಪ ಸುದ್ದಿಗಾರರೊಂದಿಗೆ ಮಾತನಾಡಿ, ಕಾನೂನು ತಂಡ ಸಲಹೆ ನೀಡಿದಂತೆ ಮೇಲ್ಮನವಿ ಸಲ್ಲಿಸಲಾಗುವುದು. ನೀರು ಬಿಡಲು ನಮ್ಮ ಬಳಿ ನೀರಿಲ್ಲ ಎಂದಿದ್ದಾರೆ.

ಈ ನಡುವೆ ರಾಜಧಾನಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜಲ ಸಂಪನ್ಮೂಲ ಖಾತೆ ಹೊಣೆ ಹೊತ್ತಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ಎರಡು ಸಾವಿರ ಕ್ಯೂಸೆಕ್ಸ್ ನೀರು ಸಾಮಾನ್ಯವಾಗಿ ತಮಿಳುನಾಡಿಗೆ ಹರಿದು ಹೋಗುತ್ತಿರುತ್ತದೆ. ಒಂದು ಸಾವಿರ ಕ್ಯುಸೆಕ್ ನೀರಿಗೆ ಪರ್ಯಾಯ ವ್ಯವಸ್ಥೆ ಮಾಡುತ್ತೇವೆ ಎಂದಿದ್ದಾರೆ.

ತಮಿಳುನಾಡಿಗೆ ನೀಡಬೇಕಿರುವ 3,000 ಸಾವಿರ ಕ್ಯೂಸೆಕ್ಸ್ ನೀರಿನಲ್ಲಿ ಕೆಆರ್‌ಎಸ್ ನಿಂದ ಒಂದು ಹನಿ ನೀರನ್ನು ಯಾವುದೇ ಕಾರಣಕ್ಕೂ ಬಿಡುಗಡೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರೈತರ ವಿಷಯದಲ್ಲಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಸರ್ಕಾರ ರಾಜಿಯಾಗುವುದಿಲ್ಲ. ಮಂಡ್ಯ ಭಾಗದ ರೈತರ ಹಿತ ಮುಖ್ಯ. ಮೇಕೆದಾಟು ಯೋಜನೆ ಬೇಕು ಎಂದು ವಿರೋಧ ಪಕ್ಷದವರು ಅಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದಾರೆ. ಇಲ್ಲಿ ಕೊಟ್ಟರೆ ಏನು ಪ್ರಯೋಜನ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ನೀವು ದೆಹಲಿಯಲ್ಲಿ ಹೋರಾಟ ಮಾಡಿ, ಇಲ್ಲಿ ಮಾಡಿದರೆ ಏನು ಪ್ರಯೋಜನ ಎಂದರು

ಸುಪ್ರೀಂಕೋರ್ಟ್ ಕೂಡ ಮೌಖಿಕವಾಗಿ ಮೇಕೆ ದಾಟು ಯೋಜನೆಗೆ ಪೂರಕವಾಗಿ ಮಾತನಾಡಿದೆ. 26 ಜನ ಸಂಸದರು ಸರ್ವ ಪಕ್ಷ ಸಭೆಯಲ್ಲಿ ರಾಜ್ಯದ ಪರವಾಗಿ ಮಾತನಾಡಿದರು. ಅದರಂತೆ ಈಗ ಪ್ರಧಾನಿಯವರನ್ನು ಭೇಟಿಯಾಗಿ ಮನವಿ ಸಲ್ಲಿಸಿ ಎಂದು ಆಗ್ರಹಿಸಿದರು.

ತಮಿಳುನಾಡಿನ ಜೊತೆ ಡಿ.ಕೆ.ಶಿವಕುಮಾರ್ ಅವರು ಮಾತುಕತೆ ನಡೆಸುತ್ತಿಲ್ಲ ಎಂದು ಕುಮಾರಸ್ವಾಮಿ ಅವರ ಆರೋಪಕ್ಕೆ ಪ್ರತಿಕ್ರಿಯಿಸಿ, ರಾಜ್ಯದ (2ನೇ ಪುಟಕ್ಕೆ)

### ಉದ್ಯೋಗ ಖಾತ್ರಿ ಮೂಲಕ ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳ ಪುನಶ್ಚೇತನ

## ವಿಮಾನ ನಿಲ್ದಾಣಕ್ಕೆ ಡಿಪಿಆರ್: ಡಿಸಿ

ದಾವಣಗೆರೆ, ಸೆ. 27 - ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್.) ರೂಪಿಸಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಚರ್ಚಿಸಿ, ಸರ್ಕಾರಕ್ಕೆ ವರದಿ ಕಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.

ಪ್ರವಾಸೋದ್ಯಮ ಇಲಾಖೆ, ಜಿಲ್ಲಾಡಳಿತ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಸಹಯೋಗದಲ್ಲಿ ನಗರದ ಎಸ್.ಎಸ್. ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದ್ದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ದಾವಣಗೆರೆ ಶೈಕ್ಷಣಿಕ ಕೇಂದ್ರ, ಇಲ್ಲಿ ಬೃಹತ್ ಉದ್ಯಮಗಳೂ ಇವೆ. ದಾವಣಗೆರೆ ರಾಜ್ಯ ಮಟ್ಟದಲ್ಲಿ ಬೆಣ್ಣೆ ನಗರಿ ಎಂದು ಗುರುತಿಸಿಕೊಂಡಿದೆ.



**ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶ**

ದಾವಣಗೆರೆ ಜಿಲ್ಲೆಯು ಕರ್ನಾಟಕದ ಮಧ್ಯ ಭಾಗದಲ್ಲಿದೆ. ರಸ್ತೆ ಹಾಗೂ ರೈಲು ಸಂಪರ್ಕವಿದೆ. ಶಿವಮೊಗ್ಗ, ಹುಬ್ಬಳ್ಳಿ ಹಾಗೂ ಬೆಂಗಳೂರು ವಿಮಾನ ನಿಲ್ದಾಣಗಳು ಹತ್ತಿರದಲ್ಲಿವೆ. ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶಗಳಿವೆ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಹೇಳಿದರು.

ಜಿಲ್ಲೆಯಲ್ಲಿ ಕದಂಬ, ಹೊಯ್ಸಳ ಹಾಗೂ ಚಾಲುಕ್ಯರ ಶೈಲಿಯ ಶಿಲ್ಪಕಲೆಗಳಿವೆ. ಸೂಳೆಕೆರೆಯಂತಹ ಅದ್ಭುತ ಕೆರೆ ಇದೆ. ಅರೆ ಮಲೆನಾಡಿನಲ್ಲಿ ಹೋಂ ಸ್ಟೇ ಹಾಗೂ ಸಾಹಸ (3ನೇ ಪುಟಕ್ಕೆ)

ವಿಮಾನ ನಿಲ್ದಾಣ ಸ್ಥಾಪನೆಯಾದರೆ ರಾಷ್ಟ್ರ ಮಟ್ಟದಲ್ಲಿ ಅಭಿವೃದ್ಧಿ ಹೊಂದಲು ಪೂರಕವಾಗಲಿದೆ ಎಂದವರು ತಿಳಿಸಿದರು.

ಪುರಾತತ್ವ ಇಲಾಖೆಯ ವ್ಯಾಪ್ತಿಗೆ ಬರುವ ಕೆಲ ದೇವಾಲಯಗಳು ಹಾಗೂ ಕಟ್ಟಡಗಳಿಗೆ ದುರಸ್ತಿಯ ಅಗತ್ಯವಿದೆ. ಪುರಾತತ್ವ ಇಲಾಖೆಯಿಂದ ಜಿಲ್ಲೆಯಲ್ಲಿ ಯಾವುದೇ ಅಧಿಕಾರಿ ಇಲ್ಲದ ಕಾರಣ ಸಮಸ್ಯೆಯಾಗಿದೆ. ಉದ್ಯೋಗ ಖಾತ್ರಿ ಯೋಜನೆಯ ಮೂಲಕ ದುರಸ್ತಿ ಕೈಗೊಳ್ಳಲು ಸರ್ಕಾರ ಆದೇಶ ಹೊರಡಿಸಿದೆ. ವಿಶೇಷ ಅನುದಾನ ಪಡೆದು ಪುನಶ್ಚೇತನ ಯೋಜನೆ ಕೈಗೊಳ್ಳಲಾಗುವುದು ಎಂದರು.

ಹಳೆ ಬೇರು - ಹೊಸ ಚಿಗುರು ಮಾದರಿಯಲ್ಲಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬೆಳೆಯಬೇಕಿದೆ. ಸಾ ವಿ ರಾ ರು (3ನೇ ಪುಟಕ್ಕೆ)

### ಅಗಡಿ ತೋಟದ ಮಾದರಿ ಪ್ರವಾಸಿ ತಾಣಗಳ ನಿರ್ಮಾಣಕ್ಕೆ ಡಿ.ಸಿ. ಸಲಹೆ

**ಅಗಡಿ ತೋಟ ಹಾಗೂ ರಾಕ್ ಗಾರ್ಡನ್ ಮಾದರಿಯ ಪ್ರವಾಸಿ ತಾಣಗಳನ್ನು ಜಿಲ್ಲೆಯಲ್ಲಿ ಅಭಿವೃದ್ಧಿ ಪಡಿಸಬೇಕು. ಇದರಿಂದ ಉದ್ಯಮಿಗಳು ಹಾಗೂ ಪ್ರವಾಸಿಗರಿಬ್ಬರಿಗೂ ಅನುಕೂಲವಾಗಲಿದೆ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಅಭಿಪ್ರಾಯ ಪಟ್ಟರು.**

**ಜಿಲ್ಲೆಯಲ್ಲಿ ವಸ್ತುಸಂಗ್ರಹಾಲಯ ಸಂಕೀರ್ಣ ನಿರ್ಮಿಸಬೇಕು, ಜಿಲ್ಲೆಯ ಪ್ರವಾಸಿ ತಾಣಗಳಿಗಾಗಿ 1-2 ದಿನಗಳ ಬಸ್ ಪ್ರವಾಸ ಸೌಲಭ್ಯ ಕಲ್ಪಿಸಬೇಕು, ಖಾಲಿ ಇರುವ ಸರ್ಕಾರಿ ಜಾಗಗಳಲ್ಲಿ ಪುಟ್ಟ ಅರಣ್ಯಗಳನ್ನು ನಿರ್ಮಿಸಿ ಪ್ರವಾಸಿಗರನ್ನು ಸೆಳೆಯಬೇಕು ಎಂದು ಹಲವಾರು ಉದ್ಯಮಿಗಳು ಈ ಸಂದರ್ಭದಲ್ಲಿ ಸಲಹೆ ನೀಡಿದರು.**

## ಪಿಯುಸಿ ಕಾಲೇಜಿಗೆ ಭೇಟಿ: ಅವ್ಯವಸ್ಥೆಗೆ ಶಾಸಕರ ದಿಗ್ಭ್ರಮೆ!



**ಕೊಡಗನೂರಿಗೆ ಭೇಟಿ ನೀಡಿ ಗ್ರಾಮಸ್ಥರ ಅಹವಾಲು ಆಲಿಸಿದ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ**

ದಾವಣಗೆರೆ, ಸೆ. 27 - ತಾಲ್ಲೂಕಿನ ಕೊಡಗನೂರು ಸರ್ಕಾರಿ ಪಿಯು ಕಾಲೇಜಿಗೆ ಬುಧವಾರ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಅಲ್ಲಿನ ಅವ್ಯವಸ್ಥೆ ಕಂಡು ದಿಗ್ಭ್ರಮೆಗೊಂಡರು.

ಕಾಲೇಜಿನಲ್ಲಿನ ಅವ್ಯವಸ್ಥೆ ಕಂಡು ದಂಗಾದ ಶಾಸಕರು, ಧೂಳು ಹಿಡಿದ ಕೊಠಡಿಗಳು, ಸ್ವಚ್ಛತೆ ಇಲ್ಲದ ಪರಿಸರ, ವಿದ್ಯಾರ್ಥಿಗಳ ಹಾಜರಾತಿ ಇಲ್ಲದಿರುವುದು, ಶಾಲಾಭಿವೃದ್ಧಿ ಸಮಿತಿ ರಚಿಸದಿರುವುದು ಹೀಗೆ ಅವ್ಯವಸ್ಥೆ ಇರುವುದನ್ನು ಕಂಡು ಅಸಮಾಧಾನ ವ್ಯಕ್ತಪಡಿಸಿದರು.

ಕೂಡಲೇ ಕಾಲೇಜಿನ ಪರಿಸರ ಸ್ವಚ್ಛತೆ ಕಾಪಾಡುವುದು, ಕೊಠಡಿಗಳನ್ನು ದುರಸ್ತಿ ಮಾಡುವುದು, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸುವುದು, ಶಾಲಾಭಿವೃದ್ಧಿ ಸಮಿತಿ ರಚಿಸಿ ಕಾಲೇಜಿನ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವಂತೆ ಉಪನ್ಯಾಸಕರಿಗೆ ಸೂಚನೆ ನೀಡಿದರು. ಈ ವೇಳೆ ಪ್ರಾಂಶುಪಾಲರ ಗೈರು ಹಾಜರಿ ಎದ್ದು ಕಂಡಿತು.

ಈ ಸಂದರ್ಭದಲ್ಲಿ ಆಸ್ಪತ್ರೆ, ಉರ್ದು ಶಾಲೆ, ಸರ್ಕಾರಿ ಪ್ರೌಢಶಾಲೆ, ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೊಡಗನೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಶಾಸಕರು, ರೋಗಿಗಳ ಆರೋಗ್ಯ ವಿಚಾರಿಸಿದರು. ಆಸ್ಪತ್ರೆಯಲ್ಲಿ ವೈದ್ಯರು ಸರಿಯಾದ ವೈದ್ಯಕೀಯ ಚಿಕಿತ್ಸೆ, ನರ್ಸ್‌ಗಳು ಮತ್ತು ಆಸ್ಪತ್ರೆಯ ಸಿಬ್ಬಂದಿಗಳು ನಿಮಗೆ ಸರಿಯಾಗಿ ಸ್ಪಂದಿಸುತ್ತಾರಾ ? ಎಂದು ರೋಗಿಗಳನ್ನು ಪ್ರಶ್ನಿಸಿದರು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಯಾವುದೇ ರೀತಿ ತೊಂದರೆ ಆಗದಂತೆ ಚಿಕಿತ್ಸೆ ನೀಡಿ, ಅವರನ್ನು ಗುಣಮುಖರನ್ನಾಗಿಸಿ ಮನೆಗೆ ಕಳುಹಿಸಬೇಕೆಂದು ವೈದ್ಯರಿಗೆ ಸೂಚನೆ ನೀಡಿದರು.

ಬಳಿಕ ಸರ್ಕಾರಿ ಪ್ರಾಥಮಿಕ ಶಾಲೆ, ಉರ್ದು ಶಾಲೆ, ಸರ್ಕಾರಿ ಪ್ರೌಢಶಾಲೆ, ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ ಶಾಸಕ ಕೆ.ಎಸ್.ಬಸವಂತಪ್ಪ, ಕೊಠಡಿಗಳನ್ನು ವೀಕ್ಷಿಸಿ, ಶಾಲಾ ಕೊಠಡಿಗಳನ್ನು ದುರಸ್ತಿಗೊಳಿಸಿ, ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಒತ್ತು ನೀಡುವಂತೆ ಮುಖ್ಯ ಶಿಕ್ಷಕರಿಗೆ ಸೂಚಿಸಿದರು.

ಮಧ್ಯಾಹ್ನ ಬಿಸಿಯೂಟ ನೀಡುವ ವೇಳೆ ಶಾಲೆಗೆ ಭೇಟಿ ನೀಡಿದ ಶಾಸಕರು, ಮಕ್ಕಳಿಗೆ ಬಡಿಸಿದ ಬಿಸಿಯೂಟ ಸವಿದು ಆಹಾರದ ಗುಣಮಟ್ಟ ಪರಿಶೀಲಿಸಿದರು. ಪ್ರತಿನಿತ್ಯ ಮಕ್ಕಳಿಗೆ ಪೌಷ್ಟಿಕ ಆಹಾರ (3ನೇ ಪುಟಕ್ಕೆ)

## ವಿದ್ಯಾನಗರದಲ್ಲಿ ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್‌ನ ಶಾಖೆ ಉದ್ಘಾಟನೆ



ದಾವಣಗೆರೆ, ಸೆ. 27 - ವಿದ್ಯಾನಗರದ ನೂತನ ಕಾಲೇಜ್ ರಸ್ತೆಯಲ್ಲಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್‌ನ 8ನೇ ಶಾಖೆಯನ್ನು ಉದ್ಘಾಟಿಸಲಾಗಿದೆ.

ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್, ಉದ್ಯಮಿ ಎಸ್.ಎಸ್. ಗಣೇಶ್, ಜವಳಿ ಉದ್ಯಮಿ ಬಿ.ಸಿ. ಉಮಾಪತಿ, ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ಬಿಜೆಪಿ ಮುಖಂಡ ಅನಿತ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ನೂತನ ಶಾಖೆಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬ್ಯಾಂಕ್‌ನ ಅಧ್ಯಕ್ಷ ಎನ್.ಎ. ಮುರುಗೇಶ್, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬ್ಯಾಂಕ್ 40 ಲಕ್ಷ ರೂ. ಹೆಚ್ಚು ಲಾಭ ಗಳಿಸಿದ್ದು, ಒಟ್ಟು ಲಾಭ ಗಳಿಕೆ 10.50 ಕೋಟಿ ರೂ. ಆಗಿದೆ ಎಂದು ತಿಳಿಸಿದರು. ಈ ಶಾಖೆಯಲ್ಲಿ ಲಾಕರ್ ಸೌಲಭ್ಯ ಕಲ್ಪಿಸಲಾಗಿದೆ. ಹಿರಿಯ ನಾಗರಿಕರು ದೂರವಾಣಿ ಕರೆ ಮಾಡಿದಾಗ ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೌಲಭ್ಯ ಕಲ್ಪಿಸುವ ಯೋಜನೆ ಇದೆ ಎಂದೂ ಅವರು ಹೇಳಿದರು.

ಯು.ಪಿ.ಐ. ಸೌಲಭ್ಯ ಒದಗಿಸುತ್ತಿರುವ ಜಿಲ್ಲೆಯ ಮೊದಲ ಸಹಕಾರಿ ಬ್ಯಾಂಕ್ ನಮ್ಮದಾಗಿದೆ. ಸಣ್ಣ ವ್ಯಾಪಾರಿಗಳಿಂದ ಹಿಡಿದು ಎಲ್ಲ ವರ್ಗದವರು ಯು.ಪಿ.ಐ. ಬಳಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬ್ಯಾಂಕ್ ಯು.ಪಿ.ಐ. ಅಳವಡಿಕೆ ಮಾಡಿಕೊಂಡಿದ್ದು, ಹೆಚ್ಚು ಜನರನ್ನು ತಲುಪಲಿದೆ. ಈ ಮೂಲಕ ಬ್ಯಾಂಕಿಗೆ ಬರುವ ಅಗತ್ಯವಿಲ್ಲದೇ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳನ್ನು ಪಡೆದುಕೊಳ್ಳಬಹುದು ಎಂದು ಮುರುಗೇಶ್ ತಿಳಿಸಿದರು. (3ನೇ ಪುಟಕ್ಕೆ)

## ಜಾಗತಿಕ ಶ್ರೇಯಾಂಕಕ್ಕೆ 91 ವಿ.ವಿ.ಗಳು ಸೇರ್ಪಡೆ

ನವದೆಹಲಿ, ಸೆ. 27 – ಟೈಮ್ಸ್ ಹೈಯರ್ ಎಜುಕೇಷನ್ (ಟಿ.ಹೆಚ್.ಇ.) ನಿಯತಕಾಲಿಕ ರೂಪಿಸಿರುವ ಜಾಗತಿಕ ವಿಶ್ವವಿದ್ಯಾಲಯ ಶ್ರೇಯಾಂಕದಲ್ಲಿ ಭಾರತ ದ 91 ವಿಶ್ವವಿದ್ಯಾಲಯಗಳು ಸೇರ್ಪಡೆಯಾಗಿವೆ. ಬೆಂಗಳೂರಿನ ಐ.ಐ.ಎಸ್.ಸಿ. 2017ರ ನಂತರ ಮೊದಲ ಬಾರಿಗೆ ಜಾಗತಿಕ 250 ವಿ.ವಿ.ಗಳ ಸಾಲಿಗೆ ಸೇರ್ಪಡೆಯಾಗಿದೆ.

ಕಳೆದ ವರ್ಷ ಈ ಪಟ್ಟಿಯಲ್ಲಿ 75 ವಿ.ವಿ.ಗಳಿದ್ದವು. ಆದರೆ, ಕಳೆದ ನಾಲ್ಕು ವರ್ಷಗಳಿಂದ ದೇಶದ ಉನ್ನತ ಐ.ಐ.ಟಿ.ಗಳು ಈ ಪಟ್ಟಿಗೆ ಬಹಿಷ್ಕಾರ ಹಾಕಿವೆ.

ಕಳೆದ ವರ್ಷ ಶ್ರೇಯಾಂಕದಲ್ಲಿ ಭಾರತ ಆರನೇ ಸ್ಥಾನದಲ್ಲಿತ್ತು. ಈ ಬಾರಿ ನಾಲ್ಕನೇ ಸ್ಥಾನಕ್ಕೆ ಬಂದಿದೆ. ಈ (2ನೇ ಪುಟಕ್ಕೆ)

## ಜಿಲ್ಲೆಯ ಅಗ್ನಿಶಾಮಕ ಸಿಬ್ಬಂದಿಗೆ ಮುಖ್ಯಮಂತ್ರಿ ಪದಕ



ದಾವಣಗೆರೆ, ಸೆ. 27- ಈಚೆಗೆ ನಡೆದ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹರಕ್ಷಕ ದಳ, ಪೌರ ರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆ ಅಧಿಕಾರಿ, ಸಿಬ್ಬಂದಿಗಳಿಗೆ ಕೊಡಮಾಡುವ ಮುಖ್ಯಮಂತ್ರಿಗಳ ಪದಕಕ್ಕೆ ನಗರದ 5 ಜನ ಭಾಜನರಾಗಿದ್ದಾರೆ.

ಅಗ್ನಿಕರೆ, ವಿಶೇಷ ಕರೆ, ಪ್ರಕೃತಿ ವಿಕೋಪ ಸಂದರ್ಭದಲ್ಲಿ ಅಸಾಧಾರಣ ಸೇವೆಗೈದಿರುವುದರಿಂದ ನಗರದ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಪ್ರಭಾರ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಕೆ.ಎಂ. ಪುಟ್ಟಸ್ವಾಮಿ, ಪ್ರಮುಖ ಅಗ್ನಿಶಾಮಕರಾದ ಟಿ.ಎಂ. ವಿಶ್ವನಾಥ್, ಫೈರೋಜ್ ಹಾಗೂ ಅಗ್ನಿಶಾಮಕ ಲಂಬಾಣಿ ಮುನಿಸ್ವಾಮಿ ನಾಯ್ಕ, ಹರಿಹರ ಅಗ್ನಿಶಾಮಕ ಸಹಾಯಕ ಠಾಣಾಧಿಕಾರಿ ಆರ್. ಸಂಜೀವ್‌ಕುಮಾರ್ ಹಾಗೂ ಚಾಲಕ ತಂತ್ರಜ್ಞ ಕುಮಾರ್ ಅವರು ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ, ಗೃಹ ಸಚಿವ ಜಿ. ಪರಮೇಶ್ವರ್ ಅವರಿಂದ ಪದಕ ಪಡೆದಿರುತ್ತಾರೆ.

## ನಾಳೆ ದಾವಣಗೆರೆ ಬಂದ್‌ಗೆ ಕರೆ

ದಾವಣಗೆರೆ, ಸೆ. 27- ಕಾವೇರಿ ಜಲ ವಿವಾದವನ್ನು ಬಗೆಹರಿಸುವಂತೆ ಆಗ್ರಹಿಸಿದ ಕನ್ನಡಪರ ಸಂಘಟನೆಗಳ ಒಕ್ಕೂಟ ಕರ್ನಾಟಕ ಬಂದ್‌ಗೆ ಬೆಂಬಲಿಸಿ ನಾಡಿದ್ದು ದಿನಾಂಕ 29 ರ ಶುಕ್ರವಾರ ದಾವಣಗೆರೆ ಬಂದ್‌ಗೆ ಕರೆ ಕೊಡಲಾಗಿದೆ ಎಂದು ಕನ್ನಡ ಪರ ಸಂಘಟನೆಗಳ ಒಕ್ಕೂಟದ ವಕ್ತಾರ ಶಿವರತನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಾವಣಗೆರೆ ವ್ಯಾಪಾರಸ್ಥರು, ಬಸ್ ಮಾಲೀಕರು, ಬ್ಯಾಂಕ್ ಉದ್ಯಮಿಗಳು, ಸಣ್ಣ ಕೈಗಾರಿಕೆಗಳು, ಮಾರುಕಟ್ಟೆ ವರ್ತಕರು, ಚಿತ್ರಮಂದಿರಗಳು ಹಾಗೂ ಜಿಲ್ಲೆಯ ಎಲ್ಲಾ ವಹಿವಾಟುದಾರರು ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ತಮ್ಮ ವಹಿವಾಟುಗಳನ್ನು ಬಂದ್ ಮಾಡುವ ಮೂಲಕ ದಾವಣಗೆರೆ ಬಂದ್‌ಗೆ ಸಹಕರಿಸುವಂತೆ ಕೋರಿದರು.

ಒತ್ತಾಯಪೂರ್ವಕವಾಗಿ ಬಂದ್ ಮಾಡಿಸುವುದಿಲ್ಲ. ಬದಲಿಗೆ ತಾವೇ ಸ್ವಯಂಪ್ರೇರಣೆಯಿಂದ ತಮ್ಮ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡುವಂತೆ ಮನವಿ ಮಾಡಿದರು. ಬಂದ್‌ನಲ್ಲಿ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು. ರೈತ ಪರ ಹೋರಾಟಗಾರರು, (2ನೇ ಪುಟಕ್ಕೆ)

## ಮಹಿಳ ಹಕ್ಕುಗಳ ದಮನ

**ಆಫ್ಘಾನಿಸ್ತಾನವನ್ನು ಲಿಂಗ ಭೇದ ನೀತಿಯ ದೇಶ ಎಂದು ಘೋಷಿಸಲು ಒತ್ತಾಯ**

ವಿಶ್ವಸಂಸ್ಥೆ, ಸೆ. 27 – ಆಫ್ಘಾನಿಸ್ತಾನದಲ್ಲಿ ಮಹಿಳೆಯರ ವಿರುದ್ಧ ನಿರಂತರ ಆದೇಶಗಳನ್ನು ಹೊರಡಿಸಲಾಗುತ್ತಿದೆ. ಆಫ್ಘಾನಿಸ್ತಾನವನ್ನು ಲಿಂಗ ಭೇದ ನೀತಿಯ ದೇಶ ಎಂದು ಘೋಷಿಸಬೇಕೆಂದು ವಿಶ್ವ ಸಂಸ್ಥೆಗೆ ಒತ್ತಾಯಿಸಿದ್ದಾರೆ.

ಬಳಿಕ ಮಾತನಾಡಿರುವ ವಿಶ್ವಸಂಸ್ಥೆಯ ಮಹಿಳಾ ವಿಭಾಗದ ಕಾರ್ಯಕಾರಿ ನಿರ್ದೇಶಕಿ ಸೀಮಾ ಬಹೌಸ್, ತಾಲಿಬಾನ್ 50ಕ್ಕೂ ಹೆಚ್ಚು ಆದೇಶಗಳನ್ನು ಮಹಿಳೆಯರ ವಿರುದ್ಧ ಹೊರಡಿಸಿದೆ. ಇದು ಮಹಿಳೆಯರಲ್ಲಿ ಮಾನಸಿಕ ಆರೋಗ್ಯ ಸಮಸ್ಯೆ ತರುತ್ತಿದೆ. ಮಹಿಳೆಯರು ತಮ್ಮ ಮನೆ ನಿರ್ಧಾರ ತೆಗೆದುಕೊಳ್ಳುವಲ್ಲಿಯೂ ಅಡ್ಡಿಯಾಗುತ್ತಿದೆ ಎಂದಿದ್ದಾರೆ.

ಮಹಿಳೆಯರು ಖೈದಿಗಳ ರೀತಿ ಮನೆಯಲ್ಲೇ ಕತ್ತಲಲ್ಲಿ ಬದುಕುವಂತಾಗಿದೆ. ಅವರಿಗೆ ಯಾವುದೇ ಭವಿಷ್ಯ ಕಂಡು ಬರುತ್ತಿಲ್ಲ ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಸೀಮಾ ತಿಳಿಸಿದ್ದಾರೆ.

ಕಾನೂನು ರೀತಿಯಲ್ಲಿ ಜನಾಂಗೀಯ ಪ್ರತ್ಯೇಕತೆ ನೀತಿ ಅನುಸರಿಸಿದಾಗ ಅದನ್ನು ವಿಶ್ವಸಂಸ್ಥೆ ಖಂಡಿಸುತ್ತದೆ. ಈ ಹಿಂದೆ ದಕ್ಷಿಣ ಆಫ್ರಿಕಾವನ್ನು ವರ್ಣಭೇದ ನೀತಿಯ ದೇಶ ಎಂದು ಗುರುತಿಸಲಾಗಿತ್ತು. ಆಫ್ಘಾನಿಸ್ತಾನದಲ್ಲಿ ಮಹಿಳೆಯರು ಹಾಗೂ ಬಾಲಕಿಯರನ್ನು ವ್ಯವಸ್ಥಿತವಾಗಿ ಪಕ್ಷಪಾತಕ್ಕೆ ಗುರಿಮಾಡಲಾಗುತ್ತಿದೆ. ಹೀಗಾಗಿ ಈ ರೀತಿಯ ದೇಶಗಳನ್ನೂ ಲಿಂಗ ಭೇದ ನೀತಿಯ ದೇಶಗಳೆಂದು ಗುರುತಿಸಬೇಕೆಂಬ ಬೇಡಿಕೆ (3ನೇ ಪುಟಕ್ಕೆ)

## ನಾನು ರೆಡಿಮೇಡ್ ಫುಡ್ ಅಲ್ಲ: ರೇಣುಕಾಚಾರ್ಯ



ದಾವಣಗೆರೆ, ಸೆ. 27- ರಾಜಕೀಯದಲ್ಲಿ ನಾನು ರೆಡಿಮೇಡ್ ಫುಡ್ ಅಲ್ಲ. ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ 1990 ರಿಂದ ನಾನು ರಾಜಕಾರಣದಲ್ಲಿ ಸಕ್ರಿಯವಾಗಿದ್ದೇನೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ತೊಗಟವೀರ ಕಲ್ಯಾಣ ಮಂಟಪದಲ್ಲಿ ಪ್ರತಿಷ್ಠಾಪಿಸಿರುವ 32ನೇ ವರ್ಷದ ಗಣೇಶೋತ್ಸವದಲ್ಲಿ ಪಾಲ್ಗೊಂಡಿದ್ದ ವೇಳೆ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಯಡಿಯೂರಪ್ಪ ಅವರು ನೂರಾರು ಕೇಸ್‌ಗಳನ್ನು ಹಾಕಿಸಿಕೊಂಡು ಜೈಲುವಾಸವನ್ನು ಅನುಭವಿಸಿದ್ದಾರೆ. ನಾನೂ ಕೂಡ ಅವರಂತೆ ಕ್ಷೇತ್ರದ ಜನತೆಗಾಗಿ ಮತ್ತು ಹಿಂದುತ್ವಕ್ಕಾಗಿ ಶಾಸಕನಾಗುವ ಮುನ್ನವೇ ನೂರಾರು ಕೇಸುಗಳನ್ನು ಹಾಕಿಸಿಕೊಂಡು ಜೈಲಿಗೆ ಹೋಗಿಬಂದವನು. ಆದ್ದರಿಂದ ನಾನು ರೆಡಿಮೇಡ್ ಫುಡ್ ಅಲ್ಲ ಎಂದು ಹೇಳಿದರು.

ನಾನು ಯಾರ ಹಿಡಿತದಲ್ಲಿಯೂ ಇಲ್ಲ. ನನ್ನನ್ನು ಯಡಿಯೂರಪ್ಪ ಬೆಳೆಸಿದ್ದು, ಹಾಗಾಗಿ ನನ್ನ ಶ್ರದ್ಧೆ ಯಡಿಯೂರಪ್ಪ ಮತ್ತು ಬಿಜೆಪಿಯ ಮೇಲಿದೆ. ಜನಪ್ರತಿನಿಧಿಯಾಗಿ ನನ್ನ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಿರುವ ತೃಪ್ತಿ ನನಗಿದೆ. ರಾಜಕಾರಣ ನಿಂತ ನೀರಲ್ಲ ಹರಿಯುವ ನೀರು. ಬಕೆಟ್ ಹಿಡಿಯುವ ರಾಜಕಾರಣ ನಾನು ಎಂದಿಗೂ ಮಾಡುವುದಿಲ್ಲ ಎಂದು ಹೇಳಿದರು.

ಮಾಜಿ ಸಚಿವ ಸಿ.ಟಿ. ರವಿ ಹಾಗೂ ವಿಧಾನಪರಿಷತ್ ಸದಸ್ಯ ಕೆ.ಎಸ್. ನವೀನ್ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ನಿನ್ನೆ ಮೊನ್ನೆ (2ನೇ ಪುಟಕ್ಕೆ)

## ದಾವಿವಿ ವ್ಯಾಪ್ತಿಯ ಪರೀಕ್ಷೆ ಮುಂದೂಡಿಕೆ

ದಾವಣಗೆರೆ, ಸೆ. 27- ಕಾವೇರಿ ನದಿ ನೀರು ವಿವಾದದ ಹಿನ್ನೆಲೆಯಲ್ಲಿ ಕರೆ ನೀಡಲಾಗಿರುವ ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ದಿನಾಂಕ 29.09.2023 ರಂದು ನಡೆಯಬೇಕಿದ್ದ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲ ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ದಿನಾಂಕ 01.10.2023 ರಂದು ನಡೆಸಲಾಗುವುದು ಎಂದು ಪರೀಕ್ಷಾಂಗ ಕುಲಸಚಿವ ಡಾ.ಕೆ.ಶಿವಶಂಕರ್ ತಿಳಿಸಿದ್ದಾರೆ.

## ಮೂರನೇ ವರ್ಷದ ಪುಣ್ಯಸ್ಮರಣೆ



**ಶ್ರೀ ಕಣ್ಣಾಳರ ಬಿ. ಜಯದೇವಪ್ಪ**

ನಿವೃತ್ತ ಪಿಡಿಓ, ಅಮರಾವತಿ

ಹಗಲು-ಇರುಳುಗಳ ಕಳೆದು,ಮೂಡುತ್ತಿರುವ ಹೊಸತಿನಂತೆ ನಿಮ್ಮ ನೆನಪು ನಮಗೆಲ್ಲ ದಾರಿ ದೀಪವಾಗಿದೆ.
ನೀವು ಕಣ್ಮರೆಯಾಗಿ ಹೋದರೂ ನೀವು, ನಿಮ್ಮ ನೆನಪುಗಳು ನಮ್ಮೆಲ್ಲರ ಹೃದಯಗಳಲ್ಲಿ ಶಾಶ್ವತವಾಗಿ ಉಳಿದಿವೆ,
ಕಷ್ಟ- ಸುಖಗಳ ತೋಳಲಾಟದ ಬದುಕಿಗೆ ನಿಮ್ಮ ಮನೋಬಲ ನಮಗೆ ದೃಢತೆ ನೀಡಿದೆ.
ನಿಮ್ಮ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ ಜೊತೆಗೆ ಸದಾ ನಿಮ್ಮ ನೆನಪಿನಲ್ಲಿರುವ

**ಇಂತಿ ದುಃಖತಪ್ತರು:**

ಬಿ. ತಿರುಕಪ್ಪ ಕಣ್ಣಾಳರ ಮತ್ತು ಮಕ್ಕಳು ಹಾಗೂ ಅಳಿಯಂದಿರು
ಮೃತರ ಧರ್ಮಪತ್ನಿ : ಶ್ರೀಮತಿ ಪಾರ್ವತಮ್ಮ
ಮೃತರ ಪುತ್ರಿ : ಶ್ರೀಮತಿ ಸುಜಾತ ಡಿ. ರೇವಣಸಿದ್ದಪ್ಪ ಮತ್ತು ಮಕ್ಕಳು ನಗರಸಭೆ ಮಾಜಿ ಅಧ್ಯಕ್ಷರು ಹರಿಹರ
ಶ್ರೀಮತಿ ಸವಿತಾ ಕೊಟ್ರೇಶ್ ಟಿ.ಯು. ಮತ್ತು ಮಕ್ಕಳು, ಧಾರವಾಡ,
ಶ್ರೀಮತಿ ಮಮತಾ ಬಿ. ಸಂದೀಪ್ ಮತ್ತು ಮಕ್ಕಳು ಹಾಗೂ ಬಂಧು ಮಿತ್ರರು, ಅಮರಾವತಿ

# ವಿಶ್ವದಲ್ಲಿಯೇ ಭಾರತಕ್ಕೆ ಪೂಜ್ಯನೀಯ ಸ್ಥಾನ



**ಹೊನ್ನಾಳಿ ಕಾರ್ಯಕ್ರಮದಲ್ಲಿ ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ**

ಹೊನ್ನಾಳಿ, ಸೆ. 27- ಜಗತ್ತಿನಲ್ಲಿ ಸೃಷ್ಟಿ ಬದಲಾಯಿಸಲು ಆಗುವುದಿಲ್ಲ. ಆದರೆ ನೋಡುವ ದೃಷ್ಟಿ ಬದಲಾಗಬೇಕು. ಇದು ಸಂಸ್ಕಾರದಿಂದ ಮಾತ್ರ ಸಾಧ್ಯ ಎಂದು ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಪಟ್ಟಣದ ಹಿರೇಕಲ್ಮಠದ ಪುರೋಹಿತರಾದ ಬೆನಕಯ್ಯ ಶಾಸ್ತ್ರಿಗಳ ನಿವಾಸದಲ್ಲಿ ಆಯೋಜಿಸಲಾಗಿದ್ದ ವಿಶೇಷ ಧಾರ್ಮಿಕ ಪೂಜಾ ಕೈಂಕರ್ಯಗಳಲ್ಲಿ ಆಶೀರ್ವಚನ ನೀಡಿದರು.

ವಿಶ್ವದಲ್ಲಿಯೇ ಭಾರತಕ್ಕೆ ಪೂಜ್ಯನೀಯ ಸ್ಥಾನವಿದೆ. ಈ ದೇಶದಲ್ಲಿರುವ ಸಮಾಜಿಕ, ಧಾರ್ಮಿಕ ಸಂಸ್ಕಾರಗಳು ಇದಕ್ಕೆ ಕಾರಣ. ಪ್ರಸ್ತುತ ದಿನಗಳಲ್ಲಿ ಮನುಷ್ಯನಿಗೆ ಎಲ್ಲವೂ ಇದೆ. ಹಣ, ವಿದ್ಯೆ, ಆಸ್ತಿ, ಸೂರು ಇವೆ. ಆದರೆ ಆರೋಗ್ಯ ಮತ್ತು ನೆಮ್ಮದಿ ಇಲ್ಲದಂತಾಗಿದೆ. ಇದಕ್ಕೆ ಪ್ರಮುಖ ಕಾರಣ ಸಂಸ್ಕಾರದ ಕೊರತೆ ಎಂದು ಹೇಳಿದರು.

ಸಮಾಜದಲ್ಲಿ ಮನುಷ್ಯನ ಆಕಾರ, ಆತನಲ್ಲಿರುವ ಸಂಪತ್ತು ನೋಡಿ ಬೆಲೆ ಕೊಡಬಾರದು. ಆತ ತನ್ನ ಜೀವನದಲ್ಲಿ ಅಳವಡಿಸಿಕೊಂಡಿರುವ ಆಚಾರ-ವಿಚಾರ, ಸಂಸ್ಕಾರಗಳನ್ನು ನೋಡಿ ಬೆಲೆ ಕೊಡಬೇಕು ಎಂದು ಹೇಳಿದರು.

ಈ ವರ್ಷದ ಶ್ರಾವಣ ಅಧಿಕ ಶ್ರಾವಣವಾಗಿದ್ದು, ಇದು ಸಾಮಾನ್ಯವಾಗಿ 75 ವರ್ಷಗಳಿಗೊಮ್ಮೆ ಬರುತ್ತದೆ. ಬಹಳ ಪವಿತ್ರವಾದದ್ದು ಎಂದು ಹೇಳಿದರು.

ಧಾರ್ಮಿಕ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಹಾಲಿ ಶಾಸಕ ಡಿ.ಜಿ. ಶಾಂತನಗೌಡ ಆಗಮಿಸಿ, ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು.

ಮುಖಂಡರಾದ ಹಿರೇಮಠದ ರುದ್ರೇಶ್, ಬಿಜೆಪಿ ತಾಲ್ಲೂಕು ಮಾಜಿ ಅಧ್ಯಕ್ಷ ದೊಡ್ಡೇರಿ ರಾಜಣ್ಣ ದಂಪತಿ ಸೇರಿದಂತೆ ಹಲವಾರು ಭಕ್ತರು ಶ್ರೀಗಳಿಂದ ಆಶೀರ್ವಾದ ಪಡೆದರು.

ಪುರೋಹಿತರಾದ ಬೆನಕಯ್ಯ ಶಾಸ್ತ್ರಿ, ಶಿವಮೊಗ್ಗದ ನಾಗರಾಜ್ ಶಾಸ್ತ್ರಿ, ಹತ್ತಾರು ಜನ ಪುರೋಹಿತ ವರ್ಗದವರು ಭಾಗವಹಿಸಿದ್ದರು.

# ಶಿವ ಕ್ರೆಡಿಟ್ ಕೋ-ಆಪ್ ಸೊಸೈಟಿಗೆ 95 ಲಕ್ಷ ರೂ. ಲಾಭ

ಹೊನ್ನಾಳಿ,ಸೆ.27- ಇಲ್ಲಿನ ಶಿವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಎಲ್ಲಾ ಸದಸ್ಯರ ಸಲಹೆ-ಸಹಕಾರದಿಂದ, ನಾಲ್ಕೂ ಶಾಖೆಗಳೂ ಲಾಭದಾಯಕವಾಗಿ ನಡೆಯುತ್ತಿವೆ, 2022-23ನೇ ಸಾಲಿನಲ್ಲಿ 95.30 ಲಕ್ಷ ರೂ. ಲಾಭ ಗಳಿಸಿದೆ ಎಂದು ಅಧ್ಯಕ್ಷ ಪಿ.ಬಿ.ಶೈಲೇಶ್ ಸಂತಸ ವ್ಯಕ್ತಪಡಿಸಿದರು.

ತಾಲ್ಲೂಕಿನ ಗೊಲ್ಲರಹಳ್ಳಿಯ ತರಳಬಾಳು ಸಮುದಾಯ ಭವನದಲ್ಲಿ ನಿನ್ನೆ ಹಮ್ಮಿಕೊಳ್ಳಲಾಗಿದ್ದ ವಾರ್ಷಿಕ ಮಹಾಸಭೆಯನ್ನುದ್ದೇಶಿಸಿ ಮಾತನಾಡಿದರು. ಸಂಘವು ಸುರಹೊನ್ನೆ, ಸಾಸ್ವೆಹಳ್ಳಿ, ಕುಂದೂರು, ಚೀಲೂರುಗಳಲ್ಲಿ ಶಾಖೆಗಳನ್ನು ಹೊಂದಿದ್ದು ಕಳೆದ ವರ್ಷದ ಮಹಾಸಭೆಯ ತೀರ್ಮಾನದಂತೆ ಸಂಘದ ಸಾಮಾನ್ಯ ಸದಸ್ಯರು ಮರಣ ಹೊಂದಿದಲ್ಲಿ ಸದಸ್ಯರ ಕ್ಷೇಮ ನಿಧಿಯಿಂದ 5000 ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪ್ರಸಕ್ತ ಸಾಲಿನಲ್ಲಿ 44 ಸದಸ್ಯರು ಮರಣ ಹೊಂದಿದ್ದು ಅವರಿಗೆ 1.99 ಲಕ್ಷ ಹಣ ಪಾವತಿಸಲಾಗಿದೆ. ಸಾಲಗಾರರ ಕ್ಷೇಮ ನಿಧಿಯನ್ನೂ ಪ್ರಾರಂಭ ಮಾಡಿದ್ದು ಇದುವರೆಗೂ ಒಟ್ಟು 18.34 ಲಕ್ಷ ಹಣ ಸಂಗ್ರಹವಾಗಿದೆ. ಇದರಲ್ಲಿ ಪ್ರಸಕ್ತ ವರ್ಷ 26 ಜನ ಮೃತ ಸಾಲಗಾರರಿಗೆ 9,08,570 ರೂ.ಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.



**ಹೊನ್ನಾಳಿ : ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿ ಅಧ್ಯಕ್ಷ ಪಿ.ಬಿ. ಶೈಲೇಶ್ ಸಂತಸ**

ಸಂಘವು ವಾರ್ಷಿಕವಾಗಿ 246.12 ಕೋಟಿ ವಹಿವಾಟು ನಡೆಸಿದ್ದು, 6.35 ಕೋಟಿ ಒಟ್ಟು ಆದಾಯ ಗಳಿಸಿದೆ. ಸಂಘವು ಪ್ರಸಕ್ತ ವರ್ಷ 95,30,140 ರೂ.ಗಳ ಲಾಭ ಗಳಿಸಿದ್ದು, 40 ಲಕ್ಷ ಆದಾಯ ತೆರಿಗೆಗೆ ಕಾಯ್ದಿರಿಸಿ 55,30,140 ರೂ.ಗಳ ನಿವ್ವಳ ಲಾಭ ಗಳಿಸಿರುತ್ತದೆ ಎಂದು ಅವರು ವಿವರಿಸಿದರು.

ಸಭೆಯಲ್ಲಿ ಸೊಸೈಟಿ ಕಾರ್ಯದರ್ಶಿ ಎಚ್. ಎನ್.ರುದ್ರೇಶ್, ಉಪಾಧ್ಯಕ್ಷರಾದ ಕೆ.ಜಿ. ಮಂಜುಳ, ನಿರ್ದೇಶಕರಾದ ಕೆ.ಎಸ್. ಶಿವಕುಮಾರ್, ಸಿ.ಶಂಕರಗೌಡ, ಬಸವರಾಜ್, ಚನ್ನವೀರಪ್ಪ, ಚಂದ್ರಪ್ಪ, ಸತೀಶ್, ಕರಿಬಸಪ್ಪ, ಚೇತನ್‌ಕುಮಾರ್, ಕೆಂಚಪ್ಪ, ಕೃಷ್ಣಾನಾಯ್ಕ್ , ಯಶೋಧಮ್ಮ ಮತ್ತಿತರರು ಉಪಸ್ಥಿತರಿದ್ದರು.

# ಕುಡಿಯುವುದನ್ನು ಬಿಡಿ : ಪೌರ ಕಾರ್ಮಿಕರಿಗೆ ಸದಸ್ಯ ಪುಟ್ಟಪ್ಪ ಮರಿಯಮ್ಮನವರ ಆಣತಿ



**ರಾಣೇಬೆನ್ನೂರು**

ರಾಣೇಬೆನ್ನೂರು, ಸೆ. 27 - ನಿಮ್ಮ ತಂದೆ- ತಾಯಿ ಕುಡಿದು-ಕುಡಿದೇ ಸತ್ತ ಹೋದರು, ತಂದೆ-ತಾಯಿ ಪ್ರೀತಿ, ಮಮತೆ ನೀವು ಕಾಣಲಿಲ್ಲ. ಮಕ್ಕಳನ್ನು ನೋಡಿ ಅವರು ಸುಖ ಕಾಣಲಿಲ್ಲ.

ಹಾಗಾಗಿ ನೀವು ಬೇಡಿ ಕುಡಿಯುವುದನ್ನು ಬಿಡಿ ಎಂದು ಪೌರ ಕಾರ್ಮಿಕರಿಗೆ ಸೂಚಿಸಿದ ನಗರಸಭೆ ಸದಸ್ಯ ಪುಟ್ಟಪ್ಪ ಮರಿಯಮ್ಮನವರ ಅವರು ತಮ್ಮ ಅಂತರಾಳದ ನೋವನ್ನು ಧ್ವನಿಯಾಗಿಸಿದರು.

ಅವರು ವರ್ತಕರ ಸಮುದಾಯ ಭವನದಲ್ಲಿ ನಡೆದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದರು.

ವರ್ಷಕ್ಕೆ ಎರಡು ಬಾರಿ ಆರೋಗ್ಯ ತಪಾಸಣೆ ಮಾಡಿಸಿ, ಕಾಯಿಲೆಗಳಿದ್ದರೆ ಗುರುತಿಸಿ ಸೂಕ್ತ ಚಿಕಿತ್ಸೆಗೆ ಕ್ರಮ, ಗುಣಮಟ್ಟದ ಸೌಲಭ್ಯಗಳ ಕೊಡುಗೆ, ನಿವೃತ್ತಿ ವೇತನದ ಬಗ್ಗೆ ಸೂಕ್ತ ಕ್ರಮ ಜಾರಿಗೆ ಪ್ರಯತ್ನ ಮುಂತಾದವುಗಳ ಬಗ್ಗೆ ನಾವು ಜವಾಬ್ದಾರಿ ನಿರ್ವಹಿಸುತ್ತೇವೆ.

ಸರ್ಕಾರಿ ನೌಕರರಾಗಿರುವ ನೀವು ನಿಮ್ಮ ಕಾಯಕದ ಬಗ್ಗೆ ಬದ್ಧತೆ ಇಟ್ಟುಕೊಳ್ಳಿರಿ ಎಂದು ಪುಟ್ಟಪ್ಪ ಹೇಳಿದರು.

ಕೋವಿಡ್ ಸಂದರ್ಭದಲ್ಲಿ ತಮ್ಮ ಜೀವದ ಹಂಗು ತೊರೆದು ಕಾರ್ಯ ನಿರ್ವಹಿಸಿದರು. ರಾಷ್ಟ್ರ ಮಟ್ಟದಲ್ಲಿ ನಗರದ ಸ್ಥಾನ-ಮಾನವನ್ನು ರಕ್ಷಿಸುವ ಕೆಲಸ ಪೌರ ಕಾರ್ಮಿಕರಿಂದಾಗಲಿದೆ.

ಹೆಚ್ಚು ಅನಾರೋಗ್ಯಕರ ವಾತಾವರಣದಲ್ಲಿಯೇ ಕಾಯಕ ನಿರ್ವಹಿಸುವ ನೀವು ನಿಮ್ಮ ಆರೋಗ್ಯದ ಕಡೆ ತೀವ್ರ ಗಮನ ಹರಿಸುವಂತೆ ಅಧ್ಯಕ್ಷತೆ ವಹಿಸಿದ್ದ ಪೌರಾಯುಕ್ತ ಕುಮ್ಮಣ್ಣನವರ, ಸದಸ್ಯರುಗಳಾದ ಪ್ರಕಾಶ ಪೂಜಾರ, ಪ್ರಭಾವತಿ ತಿಳವಳ್ಳಿ, ಗಂಗಮ್ಮ ಹಾವನೂರ, ಜಯಶ್ರೀ ಪಿಸೆ, ಮಂಜುಳಾ ಹತ್ತಿ, ಶೇಖಪ್ಪ ಹೊಸಗೌಡ್ರ, ರಮೇಶ ಕರೆಡಣ್ಣನವರ, ಮಲ್ಲಣ್ಣ ಅಂಗಡಿ, ಮಧು ಕೋಳಿವಾಡ, ಮಾಜಿ ನೌಕರ ಕರಿಬಸಪ್ಪ ಹೇಳಿ ಶುಭ ಕೋರಿದರು.

ಮಧು ಕಂಬಳಿ, ಮಾರುತಿ ಪಾಟೀಲ ಕಾರ್ಯಕ್ರಮ ನಿರೂಪಿಸಿದರು.

## ಟೆನ್ನಿಕಾಯ್ಟ್ ಸ್ಪರ್ಧೆ : ರಾಜ್ಯಮಟ್ಟಕ್ಕೆ ರಾಘವೇಂದ್ರ ವಿದ್ಯಾರ್ಥಿಗಳು



ದಾವಣಗೆರೆ, ಸೆ. 27- ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಟೆನ್ನಿಕಾಯ್ಟ್ ಸ್ಪರ್ಧೆಯಲ್ಲಿ ರಾಘವೇಂದ್ರ ಹೈಟೆಕ್ ಪಿಯು ಕಾಲೇಜಿನ ಮಾನಸ ಜಿ.ಹೆಚ್. ಭೂಮಿಕಾ ಕೊಂಪೇರ್ ಹಾಗೂ ಭೂಮಿಕಾ ಕೆ. ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರಾಚಾರ್ಯ ಡಾ. ಅನಿಲ್ ಕುಮಾರ್ ಶ್ಯಾಗಲೆ, ತರಬೇತುದಾರ ಜಿ.ಎ. ರುದ್ರಮುನಿಸ್ವಾಮಿ ಅಭಿನಂದನೆ ಸಲ್ಲಿಸಿದ್ದಾರೆ.

# ಧೂಳೆಹೊಳೆ ಶಾಲೆಗೆ ಶೂ, ಸಾಕ್ಸ್ ವಿತರಣೆ



ಮಲೇಬೆನ್ನೂರು ಸೆ 27 - ಧೂಳೆಹೊಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ 192 ವಿದ್ಯಾರ್ಥಿಗಳಿಗೆ ಸರ್ಕಾರ ಉಚಿತವಾಗಿ ನೀಡುವ ಶೂ ಮತ್ತು ಸಾಕ್ಸ್‌ಗಳನ್ನು ಸೋಮವಾರ ವಿತರಿಸಲಾಯಿತು.

ಡಾ. ಎ.ಎಸ್. ಪ್ರಶಾಂತ್ ಅವರು ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ಸಿಗುತ್ತಿದ್ದು, ಖಾಸಗಿ ಶಾಲೆಗಳಿಗಿಂತ ಇಲ್ಲಿ ಉತ್ತಮ ಕಲಿಕೆ, ಸಂಸ್ಕಾರ ಕಲಿಸುವ ಶಿಕ್ಷಕರಿದ್ದಾರೆ. ಸರ್ಕಾರ ಮಕ್ಕಳಿಗೆ ಬಿಸಿ ಊಟ, ಕ್ಷೀರ ಭಾಗ್ಯ, ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಒದಗಿಸುತ್ತಿದ್ದು, ಇದರ ಪ್ರಯೋಜನ ಪಡೆಯುವ ಮೂಲಕ ಸಾಧಕರಾಗಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಎಸ್‌.ಡಿ.ಎಂ.ಸಿ ಅಧ್ಯಕ್ಷ ನಿಜಲಿಂಗಪ್ಪ ಮಾತನಾಡಿದರು. ಆರೋಗ್ಯ ಇಲಾಖೆಯ ಎಂ. ಉಮಣ್ಣ, ಶಾಲಾ ಮುಖ್ಯ ಶಿಕ್ಷಕ ಶರಣ ಕುಮಾರ್ ಹೆಗಡೆ, ಗ್ರಾಮದ ಹಿರಿಯರಾದ ಕೆ. ಜಿ. ಶಿವಣ್ಣ, ಗ್ರಾಮ ಪಂಚಾಯತಿ ಸದಸ್ಯ ಉಚ್ಚಂಗೆಪ್ಪ, ಕೆ. ಜಿ. ಶಿವನಗೌಡ, ಶಾಲಾ ಶಿಕ್ಷಕರಾದ ಕೆ ಮಂಗಳ, ಯಶೋಧ, ರಶ್ಮಿ ಲೇಖಬಾನು, ಹೇಮಾ, ಸೌಮ್ಯ, ಅಂಜನಪ್ಪ, ಆರೋಗ್ಯ ಇಲಾಖೆಯ ಸುಧಾ, ದಾದಾಪೀರ್ ಹಾಗೂ ಇತರರು ಈ ವೇಳೆ ಹಾಜರಿದ್ದರು.

## ಎನ್ನೆಸ್ಸೆಸ್ ವ್ಯಕ್ತಿತ್ವ ವಿಕಸನಕ್ಕೆ ದಾರಿ



ಹರಿಹರ, ಸೆ. 27 - ವ್ಯಕ್ತಿತ್ವ ವಿಕಸನದ ಮೂಲ ಉದ್ದೇಶದೊಂದಿಗೆ ರಾಷ್ಟ್ರೀಯ ಸೇವಾ ಯೋಜನೆ ಪ್ರಾರಂಭಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಗಂಗಾಧರಪ್ಪ ಹೇಳಿದರು.

ನಗರದ ಶ್ರೀಮತಿ ಗಿರಿಯಮ್ಮ ಆರ್.ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದಲ್ಲಿ ಎನ್.ಎಸ್.ಎಸ್. ಘಟಕಗಳು ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ 53ನೇ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಹರಿಹರದ ಗಿರಿಯಮ್ಮ ಆರ್.ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯ ಡಾ.ಗಂಗಾಧರಪ್ಪ**

ವಿದ್ಯಾರ್ಥಿ ದೆಸೆಯಿಂದಲೇ ದೇಶಭಕ್ತಿ, ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಲು ರಾಷ್ಟ್ರೀಯ ಸೇವಾ ಯೋಜನೆ ಸಹಕಾರಿಯಾಗುತ್ತದೆ ಎಂದು ಹೇಳಿದರು.

ರಾಷ್ಟ್ರೀಯ ಸೇವಾ ಯೋಜನೆಯ ಮೊದಲ ಘಟಕದ ಕಾರ್ಯಕ್ರಮ ಅಧಿಕಾರಿಗಳಾದ ಪ್ರೊ. ರೋಹಿಣಿ ಎಂ.ಶಿರಹಟ್ಟಿ ಮಾತನಾಡಿ, ರಾಷ್ಟ್ರದ ಅತಿದೊಡ್ಡ ಯುವ ಸಂಘಟನೆಯಾದ ಎನ್.ಎಸ್.ಎಸ್. ವಿಸ್ತಾರವಾಗಿ ಬೆಳೆದಿದೆ ಎಂದರು.

ಎನ್.ಎಸ್.ಎಸ್.ನ ಎರಡನೆಯ ಘಟಕದ ಕಾರ್ಯಕ್ರಮ ಅಧಿಕಾರಿ ಹೆಚ್.ಎಂ.ಗುರುಬಸವರಾಜಯ್ಯ ಮಾತನಾಡಿ, ಮಹಾತ್ಮ ಗಾಂಧೀಜಿಯವರ ಕನಸಿನ ಕಲ್ಪನೆಯ ಕೂಸಾದ ರಾಮರಾಜ್ಯದ ಆಶಯದೊಂದಿಗೆ ಗಾಂಧೀಜಿಯವರ ಜನ್ಮದಿನೋತ್ಸವದ 100ನೇ ವರ್ಷದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ಪ್ರಾರಂಭಿಸಲಾಯಿತು. ದೇಶದಲ್ಲಿ 35 ಲಕ್ಷ ವಿದ್ಯಾರ್ಥಿಗಳು ಎನ್.ಎಸ್.ಎಸ್. ಸ್ವಯಂ ಸೇವಕರಿದ್ದಾರೆ ಎಂದು ಹೇಳಿದರು.

ರಾಜ್ಯಶಾಸ್ತ್ರ ಉಪನ್ಯಾಸಕ ಹರೀಶ್ ಮಾತನಾಡಿ, ಒಬ್ಬ ವ್ಯಕ್ತಿಯಾಗಿ ಸಮಾಜಕ್ಕೆ ಯಾವ ರೀತಿಯ ಕೊಡುಗೆಯನ್ನು ಕೊಡಬೇಕು ಎಂಬುದನ್ನು ಎನ್.ಎಸ್.ಎಸ್. ಕಲಿಸುತ್ತದೆ ಎಂದರು. ಸಮಾಜಶಾಸ್ತ್ರ ಉಪನ್ಯಾಸಕ ಜಿ.ಪ್ರವೀಣ್ ಮಾತನಾಡಿ, ಪರಿಸರ ಕಾಳಜಿ ಹಾಗೂ ರಾಷ್ಟ್ರೀಯ ಭಾವೈಕ್ಯತೆಯನ್ನು ಎನ್.ಎಸ್.ಎಸ್. ನಮಗೆ ತಿಳಿಸುತ್ತದೆ ಎಂದರು. ಮಾಧುರಿ ಪಿ.ಹೆಚ್ ಹಾಗೂ ವೀಣಾ ಪ್ರಾರ್ಥಿಸಿದರು. ತೃಪ್ತಿ ಖಿರೋಜಿ ಸ್ವಾಗತಿಸಿದರು. ಖಾತುನ್ ಬಿ.ಹೆಚ್. ಲೋಹಾರ್ ಕಾರ್ಯಕ್ರಮ ನಿರ್ವಹಿಸಿದರು. ಅನುಷಾ ಸಿ.ಆರ್. ವಂದಿಸಿದರು.

## ಮಲೇಬೆನ್ನೂರಿನಲ್ಲಿ ನಾಳೆ ಮೆರವಣಿಗೆ

ಪ್ರವಾದಿ ಮಹಮದ್ ಪೈಗಂಬರ್ ಅವರ ಜನ್ಮದಿನದ ಅಂಗವಾಗಿ ಆಚರಿಸುವ ಈದ್ ಮಿಲಾದ್ ಹಬ್ಬವನ್ನು ಮಲೇಬೆನ್ನೂರು ಪಟ್ಟಣದಲ್ಲಿ ಇಂದು ಮನೆಗಳಲ್ಲಿ ಆಚರಿಸಲಾಗುವುದು. ಅಂದು ಮಲೇಬೆನ್ನೂರಿನಲ್ಲಿ ವಾರದ ಸಂತೆ ಇರುವುದರಿಂದ ಈದ್ ಮಿಲಾದ್ ಮೆರವಣಿಗೆಯನ್ನು ನಾಳೆ ಶುಕ್ರವಾರ ಮಧ್ಯಾಹ್ನ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ, 3 ಗಂಟೆಯಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜುಮ್ಮ ಮಸೀದಿಯ ಆಡಳಿತಾಧಿಕಾರಿ ಡಾ.ನಿಸಾರ್ ತಿಳಿಸಿದ್ದಾರೆ.

## ಕಾವೇರಿ: ಸಿಎಂ-ಡಿಸಿಎಂ ಭಿನ್ನ ನಿಲುವು

**(1ನೇ ಪುಟದಿಂದ)** ಹಿತಕ್ಕೆ ಎರಡು ಪಕ್ಷಗಳು ಒಂದಾಗಿದ್ದರೆ, ಈಗಲೂ ರಾಜ್ಯದ ಹಿತಕ್ಕೆ ಮೇಕೆದಾಟು ವಿಚಾರವಾಗಿ ಕೇಂದ್ರದ ಮೇಲೆ ಒತ್ತಡ ತರಲಿ, ಮೂರು ವರ್ಷಗಳಲ್ಲಿ ಅಣೆಕಟ್ಟು ಕಟ್ಟುವ ಕೆಲಸ ಮುಗಿಸುತ್ತೇನೆ ಎಂದರು. 12,500 ಕ್ಯೂಸೆಕ್ಸ್ ನೀರಿಗೆ ತಮಿಳುನಾಡು ಬೇಡಿಕೆ ಇಟ್ಟಿತ್ತು, ನಿಮ್ಮ ಹೋರಾಟದಿಂದ ಸಮಿತಿ 3,000 ಕ್ಯೂಸೆಕ್ಸ್ ನೀರು ಬಿಡುಗಡೆಗೆ ಶಿಫಾರಸ್ಸು ಮಾಡಿದೆ. ಮತ್ತೊಮ್ಮೆ ಹೋರಾಟ ಏತಕ್ಕೆ? ಎಂದರು. ಹೋರಾಟಗಾರರ ಬಗ್ಗೆ ನಮಗೆ ತಕರಾರು ಇಲ್ಲ, ಅವರ ಜೊತೆ ನಾವಿರುತ್ತೇವೆ. ಸೆ.29 ರಂದು ಮತ್ತೊಮ್ಮೆ ಬಂದ್ ಎಂದು ಹೇಳಲಾಗುತ್ತಿದೆ, ಇದರಿಂದ ಸಾವಿರಾರು ಕೋಟಿ ವಹಿವಾಟು ಹಾಳಾಗುತ್ತದೆ, ಶಾಲಾ ಮಕ್ಕಳಿಗೆ ತೊಂದರೆಯಾಗುತ್ತದೆ ಬಂದ್ ಬೇಡ ಎಂದು ಮನವಿ ಮಾಡಿದರು.

# ದೇವದಾಸಿ ಮಹಿಳೆಯರಿಗೆ ಸೂಕ್ತ ಸೌಲಭ್ಯ ಕಲ್ಪಿಸಬೇಕು

ಹರಪನಹಳ್ಳಿ, ಸೆ.27- ಜೀವನದ ಸಂಧ್ಯಾಕಾಲದಲ್ಲಿ ದೈಹಿಕ, ಮಾನಸಿಕ, ಬೌದ್ಧಿಕವಾಗಿ ಅಪಾರ ನೋವು, ತೊಂದರೆ ಅನುಭವಿಸುವ ದೇವದಾಸಿ ಮಹಿಳೆಯರಿಗೆ ಸರ್ಕಾರ ಸೂಕ್ತ ಸೌಲಭ್ಯ ಕಲ್ಪಿಸಲಿ ಎಂದು ವಕೀಲರ ಸಂಘದ ಅಧ್ಯಕ್ಷ ಎಂ. ಅಜ್ಜಣ್ಣ ಆಗ್ರಹಿಸಿದರು.

ಪಟ್ಟಣ ತಾಲ್ಲೂಕು ವಿಕಲಚೇತನರ ಭವನ ಪಂಚಾಯತಿ ಸಭಾಂಗಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ದೇವದಾಸಿ ಮಹಿಳೆಯರಿಗೆ ಸರ್ಕಾರದ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮ ಉದ್ಘಾಟಿಸಿ ಬಳಿಕ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷ ಬಿ. ಗೋಣಿಬಸಪ್ಪ ಮಾತನಾಡಿ, ಜೀವನದಲ್ಲಿ ಬಡತನ, ಅಜ್ಞಾನ, ಅನಕ್ಷರತೆ, ಮೂಢನಂಬಿಕೆ ಮುಂತಾದ ಕಾರಣಗಳಿಂದ ಅನಿಷ್ಟ ದೇವದಾಸಿ ಪದ್ಧತಿಗೆ ಸಿಲುಕಿ ಪರಿತಪಿಸುವ ಮಹಿಳೆಯರು ಕೊನೆಗಾಲದಲ್ಲಿ ಕುಟುಂಬದವರ ಪ್ರೀತಿ, ಆರೈಕೆಯಿಂದ ವಂಚಿತರಾಗಿ ನಾನಾ ರೋಗಗಳಿಗೆ ತುತ್ತಾಗಿ ಒಂಟಿತನದಿಂದ, ಮನೋವಿಕಲತೆಯಿಂದ, ದೈಹಿಕ ತೊಂದರೆಯಿಂದ ಬಳಲುವರು, ಶೋಷಣೆಯಿಂದ ಅವರು ಹೊರಬರಲು ಸಂಕಲ್ಪ ಮಾಡಬೇಕಿದೆ ಎಂದರು.



**ಹರಪನಹಳ್ಳಿ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎಂ. ಅಜ್ಜಣ್ಣ ಆಗ್ರಹ**

ವಕೀಲ ಎಂ.ಮೃತ್ಯುಂಜಯ ಮಾತನಾಡಿ, ಅವರ ಕುಟುಂಬ ವರ್ಷದ ಮಹಿಳೆಯರು, ಮಕ್ಕಳು ಇಂತಹ ಅನಿಷ್ಟ ಪದ್ಧತಿಗಳಿಗೆ ಬಲಿಯಾಗದಿರಲು ಸರ್ಕಾರದ ಪ್ರಜ್ಞಾವಂತ ನಾಗರಿಕರ ಸಂಘ-ಸಂಸ್ಥೆಗಳ ಸಹಾಯ ಸಹಕಾರ ಪಡೆದು ಪುನರ್ವಸತಿ ಹೊಂದಬೇಕಿದೆ. ಇಲ್ಲದೆ ನಾನಾ ಕಾರಣದಿಂದಾಗಿ ನಡೆಯುವ ಮುತ್ತು ಕಟ್ಟುವ ದೇವದಾಸಿ ವೇಶಾವಾಟಿಕೆ ಇಂತಹ ಅನಿಷ್ಟ ಪದ್ಧತಿಗಳನ್ನು ಕೈಬಿಟ್ಟು ಸರ್ಕಾರ ನೀಡಿದ ಯೋಜನೆಯನ್ನು ಸದುಪಯೋಗ ಪಡೆದುಕೊಂಡು ಮುಖ್ಯವಾಹಿನಿಗೆ ಬರಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ವಕೀಲರಾದ ಕೆ. ಸಣ್ಣ ನಿಂಗನಗೌಡ, ಎಂ.ನಾಗೇಂದ್ರಪ್ಪ, ಬಿ.ಸಿದ್ದೇಶ್, ತಾಲ್ಲೂಕು ಕಾನೂನು ಸೇವಾ ಸಮಿತಿಯ ಸದಸ್ಯರಾದ ಬಾಗಳಿ ಕೊಟ್ರೇಶ್, ಬಸವರಾಜ್ ಸೇರಿದಂತೆ ವಿಕಲಚೇತನರ ಅಧಿಕಾರಿಗಳು ಮತ್ತು ಇತರರು ಸಿಬ್ಬಂದಿಗಳು ಹಾಜರಿದ್ದರು.

## ವಿ.ವಿ.ಗಳು ಶ್ರೇಯಾಂಕ ಪೇರ್ಪಡೆ

**(1ನೇ ಪುಟದಿಂದ)** ಪಟ್ಟಿಯಲ್ಲಿ ಐ.ಐ.ಎಸ್.ಸಿ. ಬೆಂಗಳೂರು ಮೊದಲ ಸ್ಥಾನದಲ್ಲಿದೆ. ಅಣ್ಣಾ ವಿಶ್ವವಿದ್ಯಾಲಯ ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಜಾಮಿಯಾ ಮಿಲಿಯಾ ಇಸ್ಲಾಮಿಯ, ಮಹಾತ್ಮ ಗಾಂಧಿ ವಿಶ್ವವಿದ್ಯಾಲಯ, ಶೂಲಿನಿ ಬಯೋಟೆಕ್ ವಿಶ್ವವಿದ್ಯಾಲಯಗಳಿವೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಗೌಹಾತಿ ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಧನ್‌ಬಾದ್‌ಗಳು ಮೊದಲ 800 ವಿ.ವಿ.ಗಳ ಸಾಲಿನಲ್ಲಿವೆ. ಟಿ.ಹೆಚ್.ಇ. ಶ್ರೇಯಾಂಕ ಮಾನದಂಡಗಳ ಬಗ್ಗೆ ಆಕ್ಷೇಪಿಸಿದ್ದ ಏಳು ಐ.ಐ.ಟಿ.ಗಳು, 2020ರಿಂದ ಈ ಶ್ರೇಯಾಂಕದಿಂದ ಹೊರಗಿವೆ.

## ದಾವಣಗೆರೆ ಬಂದ್‌ಗೆ ಕರೆ

**(1ನೇ ಪುಟದಿಂದ)** ಆಟೋ ಚಾಲಕರ ಸಂಘದ ಪದಾಧಿಕಾರಿಗಳು ಹಾಗೂ ಎಲ್ಲಾ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಬಂದ್ ನಲ್ಲಿ ಭಾಗವಹಿಸುವಂತೆ ಕೋರಿದರು. ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ವರುಣ್ ಬೆಣ್ಣೆಹಳ್ಳಿ, ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಪ್ರಕಾಶ್, ಶಮಂತ್ ಕುಮಾರ್ ಉಪಸ್ಥಿತರಿದ್ದರು.




**12ನೇ ವರ್ಷದ ಪುಣ್ಯಸ್ಮರಣೆ**

**ಶ್ರೀಮತಿ ಕೆ.ಸಿ. ಗಂಗಮ್ಮ**

*ನೀವು ನಮ್ಮನ್ನು ಅಗಲಿ ಇಂದಿಗೆ ಹನ್ನೆರಡು ವರ್ಷಗಳಾದವು ಸದಾ ನಿಮ್ಮ ಸ್ಮರಣೆಯಲ್ಲಿರುವ...*

**ಎಂ. ಆರ್. ಮಹೇಶ್ವರಪ್ಪ**
**ಚಂದನ್ - ಚೇತನ್**

ನಿಧನ : 28.09.2011

ಪುಣ್ಯಾರಾಧನೆ ಕಾರ್ಯಕ್ರಮವನ್ನು ಇಂದು ಸಂಜೆ 8.00 ಗಂಟೆಗೆ ಶ್ರೀ ಹಾಲನಕೆರೆ ಅನ್ನದಾನೀಶ್ವರ ಶಾಖಾ ಮಠ, ದಾವಣಗೆರೆ ಇಲ್ಲಿ ನೆರವೇರಿಸಲಾಗುತ್ತದೆ.

**ಗುರುಲಿಂಗ ಜಂಗಮಾರಾಧನೆ**



ಶ್ರೀಮತಿ ಎಂ.ಪುಷ್ಪಾವತಿ

ದಾವಣಗೆರೆ ಸಿಟಿ, ಪಿ.ಜೆ. ಬಡಾವಣೆ, 8ನೇ ಮೇನ್, 7ನೇ ಕ್ರಾಸ್ ವಾಸಿಗಳಾದ ಎಂ. ಚನ್ನಬಸವ ಶರ್ಮ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು ದಿ.24.9.2023ನೇ ಭಾನುವಾರ ಬೆಳಗ್ಗೆ 11.50ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಎಂ. ಪುಷ್ಪಾವತಿ**

(ಲಿಂ. ಎಂ. ಮಲ್ಲಿಕಾರ್ಜುನಯ್ಯನವರ ಧರ್ಮಪತ್ನಿ) ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಜಂಗಮಾರಾಧನೆಯನ್ನು ದಿ.28.09.2023ನೇ ಗುರುವಾರ ಬೆಳಗ್ಗೆ 12ಕ್ಕೆ ಮೃತರ ಸ್ವಗೃಹ ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮತ್ತೋಡು ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.

ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ನಾನು ರೆಡಿಮೇಡ್ ಫುಡ್ ಅಲ್ಲ: ರೇಣುಕಾಚಾರ್ಯ

**(1ನೇ ಪುಟದಿಂದ)** ಬಂದವರ ಹೇಳಿಕೆಗಳಿಗೆ ಮಹತ್ವ ಕೊಡುವ ಅಗತ್ಯವಿಲ್ಲ ಎಂದು ಹೇಳಿದರು.

ದೇಶಕ್ಕೆ ನರೇಂದ್ರ ಮೋದಿ ರಾಜ್ಯಕ್ಕೆ ಬಿ.ಎಸ್. ಯಡಿಯೂರಪ್ಪ ಎನ್ನುವ ನಾನು, ಕಾಂಗ್ರೆಸ್‌ಗೆ ಹೋಗುತ್ತೇನೆ ಎಂದೂ ಎಲ್ಲೂ ಹೇಳಿಲ್ಲ. ನಾನು ಬಿಜೆಪಿ ಕಟ್ಟಾಳು ಎಂದು ಎದೆಬಗೆದು ತೋರಿಸಬೇಕಾ? ಎಂದು ಪ್ರಶ್ನಿಸಿದರು.

ಇಂದು ಗಣ ಹೋಮ ಹಾಗೂ ಪೂಜೆಗೆ ಬಂದಿದ್ದೇನೆ. ಉತ್ತಮ ಮಳೆ ಆಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿದ್ದೇನೆ. ಸಕಲ ಜೀವರಾಶಿಗೆ ಒಳಿತಾಗಲಿ ಎಂದು ಬೇಡಿಕೊಂಡಿದ್ದೇನೆ ಎಂದರು.

# ವಿಭಾಗೀಯ ಮಟ್ಟಕ್ಕೆ ಜಗಳೂರು ತಾ. ಕ್ರೀಡಾಪಟುಗಳು




ಜಗಳೂರು, ಸೆ. 27 - ತಾಲ್ಲೂಕಿನ ವಿವಿಧ ಸರ್ಕಾರಿ ಶಾಲಾ ವಿದ್ಯಾರ್ಥಿಗಳು ಜಿಲ್ಲಾಮಟ್ಟದ ವಿವಿಧ ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಗಳಿಸಿ, ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಹುಚ್ಚವ್ವನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಾಲಕಿಯರು ಚನ್ನಗಿರಿ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ ಥ್ರೋ ಬಾಲ್ ಅಂತಿಮ ಪಂದ್ಯಾವಳಿಯಲ್ಲಿ ಹರಿಹರ ತಂಡವನ್ನು ಮಣಿಸಿ ಪ್ರಥಮ ಸ್ಥಾನ ಪಡೆದು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ದೈಹಿಕ ಶಿಕ್ಷಕರೇ ಇಲ್ಲದ ಶಾಲೆಯಲ್ಲಿ ಸಹ ಶಿಕ್ಷಕ ಕೊಟ್ರೇಶ್, ಮುಖ್ಯ ಶಿಕ್ಷಕ ಗೋವಿಂದಪ್ಪ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದಿದ್ದರು.ವಿಜೇತರಿಗೆ ಎಸ್‌ಡಿಎಂಸಿ ಅಧ್ಯಕ್ಷ ಹೆನ್ನಪ್ಪ, ಗ್ರಾಮಸ್ಥರಾದ ಕೊಟ್ರೇಶ್, ಲಕ್ಷ್ಮಣ, ರವಿ, ಮನು, ಸೇರಿದಂತೆ ಹಲವರು ಶುಭ ಹಾರೈಸಿದ್ದಾರೆ.

ಜಗಳೂರು ಗೊಲ್ಲರಹಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಾಲಕರು ಚನ್ನಗಿರಿ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ ಥ್ರೋ ಬಾಲ್ ಫೈನಲ್ ಪಂದ್ಯದಲ್ಲಿ ದಾವಣಗೆರೆ ಸೆಂಟ್ ಮೇರಿಸ್ ಶಾಲೆಯ ಬಾಲಕರೊಂದಿಗೆ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಗಳಿಸಿ ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿಜೇತರಿಗೆ ತರಬೇತುದಾರರು ಹಾಗೂ ಸಹ ಶಿಕ್ಷಕರಾದ ರುದ್ರಮುನಿ, ಎಸ್.ಓಂಕಾರಮ್ಮ, ಎಸ್‌ಡಿಎಂಸಿ ಅಧ್ಯಕ್ಷ ತಿಪ್ಪೇಸ್ವಾಮಿ ಅಭಿನಂದನೆ ಸಲ್ಲಿಸಿದ್ದಾರೆ.

ಯರ್ಲಕಟ್ಟೆ ಪ್ರೌಢಶಾಲೆಯ ಬಾಲಕಿಯರ ಬ್ಯಾಡ್ಮಿಂಟನ್ ತಂಡ ಜಿಲ್ಲಾ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಈಚೆಗೆ ನಡೆದ ದಸರಾ ಕ್ರೀಡಾಕೂಟದಲ್ಲಿ ಇದೇ ತಂಡ ಜಿಲ್ಲಾ ಮಟ್ಟದಲ್ಲಿ ಸೆಣಸಾಡಿ ಗಮನ ಸೆಳೆದಿತ್ತು. ತಂಡಕ್ಕೆ ಮುಖ್ಯ ಶಿಕ್ಷಕ ಮಹಾಂತೇಶ್ ಅಭಿನಂದನೆ ಸಲ್ಲಿಸಿದ್ದಾರೆ.

## ಕೆಟಿಜೆ ನಗರದಲ್ಲಿ ಇಂದು ಅನ್ನ ಸಂತರ್ಪಣೆ, ಸತ್ಯನಾರಾಯಣ ಪೂಜೆ

ಕೆಟಿಜೆ ನಗರ 2 ನೇ ಕ್ರಾಸ್‌ನಲ್ಲಿನ ಶ್ರೀ ಮಹಾಗಣಪತಿ, ಶ್ರೀ ಶನೈಶ್ಚರ, ಶ್ರೀ ದುರ್ಗಾದೇವಿ ದೇವಸ್ಥಾನ ಸಮಿತಿ ವತಿಯಿಂದ 46 ನೇ ವರ್ಷದ ಗಣೇಶ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 9.30 ರಿಂದ ಕೆಟಿಜೆ ನಗರ 1 ನೇ ತಿರುವಿನಲ್ಲಿ ಕುಲ ದೇವರ ಮರಗಳಾದ ಅರಳಿ (ಅಶ್ವತ್ಥ್), ಬನ್ನಿ (ಶಮೀ) ಮತ್ತು ಬೇವಿನ ಮರಗಳಿಗೆ ಪುರೋಹಿತರಾದ ವಿಲಾಸ್ ಭಟ್ ಮತ್ತು ವೃಂದದವರು ದೀಕ್ಷೆ ನೆರವೇರಿಸಿಕೊಡಲಿದ್ದಾರೆ.

ಗಣ ಹೋಮದ ನಂತರ ಮಧ್ಯಾಹ್ನ 12.30 ಕ್ಕೆ ಅನ್ನ ಸಂತರ್ಪಣೆ, ಸಂಜೆ 6.30 ಕ್ಕೆ ಹುಣ್ಣಿಮೆಯ ಪ್ರಯುಕ್ತ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ಏರ್ಪಡಿಸಲಾಗಿದೆ.

ಸೆ. 30 ರಂದು ಮಧ್ಯಾಹ್ನ 3 ಗಂಟೆಗೆ ಹರಾಜು ಕಾರ್ಯಕ್ರಮ, 4 ಗಂಟೆಗೆ ರಾಜ ಬೀದಿಗಳಲ್ಲಿ ಮೆರವಣಿಗೆ ಮೂಲಕ ಗಣಪತಿ ವಿಸರ್ಜನಾ ಕಾರ್ಯಕ್ರಮ ನೆರವೇರಲಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ನಗರದಲ್ಲಿ ಈದ್-ಮಿಲಾದ್ ಭರ್ಜರಿ ತಯಾರಿ, ಮಕ್ಕಳ ಖುಷಿ



ದಾವಣಗೆರೆ, ಸೆ. 27- ಮುಸ್ಲಿಂ ಬಾಂಧವರು ನಾಳೆ ಆಚರಿಸಲಿರುವ ಈದ್ ಮಿಲಾದ್ ಹಬ್ಬದ ಖರೀದಿಯ ಆರ್ಭಟ ಮುಗಿಲು ಮುಟ್ಟಿದ್ದು, ಭರ್ಜರಿ ತಯಾರಿಯಲ್ಲಿರುವ ಮಕ್ಕಳು, ಯುವಕರು ಗಲ್ಲಿ ಗಲ್ಲಿಗಳಲ್ಲಿ ಝುಂಡಾಗಳನ್ನು ಕಟ್ಟಿ ದೀಪಾಲಂಕಾರದಿಂದ ಶೃಂಗಾರಗೊಳಿಸಿರುವ ದೃಶ್ಯ ನಗರಾದ್ಯಂತ ಕಂಡು ಬಂದಿದೆ.



ಆಜಾದ್ ನಗರ, ಭಾಷಾನಗರ, ಇಮಾಂನಗರ ಸೇರಿದಂತೆ ವಿನೋಬನಗರ, ಕೆಟಿಜೆ ನಗರ, ಜಾಲಿ ನಗರದಲ್ಲಿಯೂ ಸಹ ಹಬ್ಬದ ತಯಾರಿಯಲ್ಲಿ ಮಿಂದಿರುವ ಮುಸ್ಲಿಂ ಬಾಂಧವರು ಮಕ್ಕಳಿಗೆ ಜುಬ್ಬಾ, ಕುರ್ತಾ, ಪೈಜಾಮ, ಫ್ಯಾನ್ಸಿ ಡ್ರೆಸ್‌ಗಳ ಖರೀದಿ ಒಂದೆಡೆ ಇದ್ದರೆ, ಹಬ್ಬದ ವಿಶೇಷ ಪಾಯಸ ಮಾಡಲು ಶ್ಯಾವಿಗೆ, ಆಹಾರ ಸಾಮಗ್ರಿಗಳ ಖರೀದಿ ಮತ್ತೊಂದೆಡೆ. ಇವೆಲ್ಲದರ ನಡುವೆ ಮೆಹಂದಿ, ಬ್ಯಾಂಗಲ್ಸ್, ಖರೀದಿಯಿಂದ ಕಾಸ್ಮೆಟಿಕ್ಸ್ ಅಂಗಡಿಗಳಲ್ಲಿ ಜನಜಂಗುಳಿಯಿಂದ ತುಂಬಿ ತುಳುಕುತ್ತಿರುವುದು ಮತ್ತೊಂದು ವಿಶೇಷ.

ರಂಗುರಂಗಿನ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ನಗರದ ವಿವಿಧ ಬಡಾವಣೆಗಳಲ್ಲಿ ಸಂಘ-ಸಂಸ್ಥೆಗಳಿಂದ ಅನ್ನ ಸಂತರ್ಪಣೆ, ರಕ್ತದಾನ ಶಿಬಿರ, ವಿದ್ಯಾರ್ಥಿಗಳಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಈದ್ ಮಿಲಾದ್ ಹಬ್ಬಕ್ಕೆ ಮೆರಗು ನೀಡುವಂತಿದೆ. ಪ್ರವಾದಿ ಮಹ್ಮದ್ ಪೈಗಂಬರ್ ಅವರ ಜನ್ಮ ದಿನದ ಸಂಭ್ರಮದಲ್ಲಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮಗಳಲ್ಲಿ ರೋಗಿಗಳಿಗೆ ಹಣ್ಣು ವಿತರಣೆ, ಬಡವರಿಗೆ, ನಿರ್ಗತಿಕರಿಗೆ ಫುಡ್ ಪ್ಯಾಕೇಟ್ ನೀಡಿ ಹಬ್ಬದ ಖುಷಿ ವಿನಿಮಯ ಮಾಡಿಕೊಂಡಿರುವುದು ಬಹಳ ವಿಶೇಷ.

# ಎನ್‌ಡಿಎ ಸೇರಿದರೂ ಜಾತ್ಯತೀತ ಬದ್ಧತೆ : ದೇವೇಗೌಡ

ಬೆಂಗಳೂರು, ಸೆ.27- ಜೆಡಿಎಸ್ ಎನ್‌ಡಿಎ ಮೈತ್ರಿ ಕೂಟ ಸೇರಿದರೂ ಜಾತ್ಯತೀತ ನಿಲುವಿನ ಬದ್ಧತೆಯಲ್ಲಿ ಯಾವುದೇ ರಾಜಿ ಇಲ್ಲ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 60 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಅಲ್ಪಸಂಖ್ಯಾತರಷ್ಟೇ ಅಲ್ಲ, ಯಾವುದೇ ಸಮುದಾಯಕ್ಕೆ ಅನ್ಯಾಯ ಆಗಲು ಬಿಟ್ಟಿಲ್ಲ. ನೇರ ಅಥವಾ ಪರೋಕ್ಷವಾಗಿ ಬಿಜೆಪಿ ಯೊಂದಿಗಿನ ಸಂಬಂಧವಿಲ್ಲದೆ ಸ್ವಚ್ಛವಾಗಿರುವ ಯಾವುದೇ ಒಂದು ಪಕ್ಷವಿದ್ದರೆ ಯಾರು ಬೇಕಾದರೂ ಪ್ರಶ್ನಿಸಬಹುದು ಎಂದರು.

ಕುಮಾರಸ್ವಾಮಿ ಅವರು ಮೊದಲು ಬಿಜೆಪಿ ಜತೆ ಸೇರಿ ಸರ್ಕಾರ ರಚನೆ ಮಾಡಿದ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಹಿತ ಕಾಪಾಡ ಲಾಗಿದೆ ಎಂದು ಮಂಗಳೂರು ಘಟನೆ ಯೊಂದನ್ನು ನಿದರ್ಶನವಾಗಿ ಪ್ರಸ್ತಾಪಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರೊಂದಿಗೆ ರಾಜ್ಯದ ರಾಜಕೀಯ ಸ್ಥಿತಿಗತಿ ಬಗ್ಗೆ ಚರ್ಚಿಸಿದ ಬಳಿಕ ನಮ್ಮ ಶಾಸಕರೊಂದಿಗೆ ಸಮಾಲೋಚಿಸಿ, ಬಿಜೆಪಿಯೊಂದಿಗಿನ ಮೈತ್ರಿ ವಿಚಾರದಲ್ಲಿ ಮುಂದುವರೆಯಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅನುಮತಿ ನೀಡಲಾಗಿದೆ.

ಮೈತ್ರಿ ಕುರಿತ ಮಾತುಕತೆ ಒಂದು ಹಂತ ತಲುಪಿದೆ. ಇನ್ನೂ ಈ ವಿಚಾರವಾಗಿ ಪ್ರಧಾನಿ ಅವರೊಂದಿಗೆ ಮಾತುಕತೆ ನಡೆಸಿಲ್ಲ. ಅಲ್ಲದೆ, ಲೋಕಸಭಾ ಚುನಾವಣೆಯ ಸೀಟು ಹಂಚಿಕೆ ಬಗ್ಗೆ ಚರ್ಚೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಎರಡೂ ಪಕ್ಷಗಳ ಸಂಸದೀಯ ಮಂಡಳಿ ಸಭೆಯಲ್ಲಿ ಚರ್ಚೆಯಾದ ಬಳಿಕ ಮೈತ್ರಿ ವಿಚಾರದ ರೂಪುರೇಷೆ ಸಿದ್ಧವಾಗಲಿದೆ. ಸೀಟು ಹಂಚಿಕೆಯೂ ಆಗಲಿದೆ ಎಂದು ಹೇಳಿದರು.

ಅಲ್ಪಸಂಖ್ಯಾತರ ರಕ್ಷಣೆಯನ್ನು ಜೆಡಿಎಸ್ ಹಿಂದೆಯೂ ಮಾಡಿದೆ, ಮುಂದೆಯೂ ಮಾಡಲಿದೆ. ಅವಕಾಶವಾದಿ ರಾಜಕಾರಣ ಮಾಡುವುದಿಲ್ಲ. ಪ್ರಾದೇಶಿಕ ಪಕ್ಷದ ಉಳಿವಿಗಾಗಿ ಮೈತ್ರಿ ನಿರ್ಧಾರ ಮಾಡಬೇಕಾಯಿತು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಕೇರಳದ ನಮ್ಮ ಸ್ನೇಹಿತರು ಕರ್ನಾಟಕದಲ್ಲಿ ಪಕ್ಷವನ್ನು ಉಳಿಸಿ, ಮುನ್ನಡೆಸುವುದಾದರೆ, ರಾಜ್ಯಾಧ್ಯಕ್ಷ ಸ್ಥಾನ ಬಿಟ್ಟುಕೊಡಲು ಸಿದ್ಧ ಎಂದೂ ಹೇಳಿದರು.

ಮೈತ್ರಿ ಮಾಡಿಕೊಳ್ಳುವ ಪರಿಸ್ಥಿತಿ ಏಕೆ ನಿರ್ಮಾಣವಾಯಿತು. ಇದಕ್ಕೆ ಯಾರು ಕಾರಣ ಎಂದು ಪ್ರಶ್ನಿಸಿದ ಅವರು, ಬಲವಂತವಾಗಿ ಕಾಂಗ್ರೆಸ್ ನಾಯಕರು ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಮೈತ್ರಿ ಸರ್ಕಾರದ ಮುಖ್ಯಮಂತ್ರಿ ಮಾಡಿದರು.

ಆದರೆ, 17 ಮಂದಿ ಶಾಸಕರನ್ನು ಮುಂಬೈಗೆ ಕಳುಹಿಸಿ ಮೈತ್ರಿ ಸರ್ಕಾರ ತೆಗೆದು, ಬಿಜೆಪಿ ಸರ್ಕಾರ ರಚನೆಗೆ ಯಾರು ಕಾರಣ? ಎಂದು ಪ್ರಶ್ನಿಸಿದರು.

ರಾಜ್ಯ ಮತ್ತು ರಾಷ್ಟ್ರದಲ್ಲಿ ಜಾತ್ಯತೀತ ಶಕ್ತಿಗಳನ್ನು ದುರ್ಬಲಗೊಳಿಸಲು ಕಾಂಗ್ರೆಸ್ ಯತ್ನಿಸಿರುವುದಕ್ಕೆ ಹತ್ತು ಹಲವು ನಿದರ್ಶನಗಳನ್ನು ನೀಡಬಲ್ಲೆ.

ಬಿ.ಎಂ.ಫಾರೂಕ್ ಅವರು ರಾಜ್ಯ ಸಭೆ ಚುನಾವಣೆಗೆ ಸ್ಪರ್ಧಿಸಿದಾಗ 7 ಶಾಸಕರು ಪಕ್ಷಾಂತರ ಮಾಡಿ ಸೋಲಿಸಿದವರು ಯಾರು? ಕಾಶ್ಮೀರದಲ್ಲಿ ಫಾರೂಕ್ ಅಬ್ದುಲ್ ಸರ್ಕಾರ ತೆಗೆದದ್ದು ಯಾರು ? ಎಂದು ವಾಗ್ದಾಳಿ ನಡೆಸಿದ ಅವರು, ಜಾತ್ಯತೀತ ನಿಲುವಿನ ಬಗ್ಗೆ ಕಾಂಗ್ರೆಸ್‌ನಿಂದ ಪಾಠ ಕಲಿಯಬೇಕೇ? ಎಂದು ಪ್ರಶ್ನಿಸಿದರು.

# ವಿಮಾನ ನಿಲ್ದಾಣಕ್ಕೆ ಡಿಪಿಆರ್: ಡಿಸಿ

**(1ನೇ ಪುಟದಿಂದ)** ವರ್ಷಗಳ ಸಾಂಸ್ಕೃತಿಕ ಹಿರಿಮೆ ಬಿಂಬಿಸುವ ಕಲೆಯನ್ನು ರಕ್ಷಿಸಬೇಕಿದೆ. ಇದರ ಜೊತೆಗೆ ಈಗಿನ ಪೀಳಿಗೆಗೆ ಅವಶ್ಯಕತೆ ಇರುವ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಬೇಕಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಪ್ರವಾಸೋದ್ಯಮ ಅಭಿವೃದ್ಧಿಯಾಗುವುದರಿಂದ ಜಿಲ್ಲೆಗೆ ಆದಾಯ ಹೆಚ್ಚುತ್ತದೆ. ಉದ್ಯಮಿಗಳಿಗೆ ಅವಕಾಶ ಸಿಗುವ ಜೊತೆಗೆ, ನಿರುದ್ಯೋಗಿಗಳಿಗೆ ಕೆಲಸ ಸಿಗುತ್ತದೆ. ಪ್ರವಾಸಿಗಳಿಗೂ ಹೊಸತನ ಸಿಗುತ್ತದೆ. ಹೀಗಾಗಿ ಈ ವಲಯ ಎಲ್ಲರಿಗೂ ಗೆಲುವು ತರುವಂಥದ್ದು ಎಂದು ವೆಂಕಟೇಶ್ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರವಾ ಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಎಲ್. ಪಿ. ಮಧು, ಜಿಲ್ಲೆಯಲ್ಲಿ ಹೊದಿಗೆರೆ, ಅಮ್ಮನಗುಡ್ಡ, ಕುರುವ, ಕಣ್ವಕುಪ್ಪೆ, ಕೊಂಡಜ್ಜಿ ಸೇರಿದಂತೆ ಸಾಕಷ್ಟು ಪ್ರವಾಸಿ ತಾಣಗಳಿವೆ. ಇವುಗಳ ಅಭಿವೃದ್ಧಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಕಳಿಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪರಿಸರ ಅಧಿಕಾರಿ ಹೆಚ್. ಲಕ್ಷ್ಮಿಕಾಂತ ಉಪಸ್ಥಿತರಿದ್ದರು.

## ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶ

**(1ನೇ ಪುಟದಿಂದ)** ಪ್ರವಾಸೋದ್ಯಮಗಳಿಗೆ ಅವ ಕಾಶ ಇದೆ. ತುಂಗಭದ್ರಾ ನದಿಯ ದಡಗಳಲ್ಲಿ ಪ್ರವಾಸಿ ತಾಣಗಳಿಗೆ ಅವಕಾಶ ಇದೆ. ಇಂತಹ ತಾಣಗಳ ಅಭಿವೃದ್ಧಿಗೆ ಸರ್ಕಾರದಿಂದ ಸಹಕಾರ ನೀಡಲಾಗುವುದು ಎಂದವರು ತಿಳಿಸಿದರು.

# ರಕ್ತದಾನದ ಅರಿವು ಜಾಗೃತಿ ಕಾರ್ಯಕ್ರಮ



ದಾವಣಗೆರೆ, ಸೆ. 27 - ಲೈಫ್ ಲೈನ್ ಸ್ವಯಂ ಪ್ರೇರಿತ ರಕ್ತದಾನಿಗಳ ಸಮೂಹದ ವತಿಯಿಂದ ಅಮೃತ ವಿದ್ಯಾಲಯಂ ಪದವಿ ಪೂರ್ವ ಕಾಲೇಜಿನಲ್ಲಿ 'ರಕ್ತದಾನದ ಬಗ್ಗೆ ಜಾಗೃತಿ ಮತ್ತು ಅರಿವು' ಕಾರ್ಯಕ್ರಮನ್ನು ಹಮ್ಮಿಕೊಳ್ಳಲಾಗಿತ್ತು.

ಉಪಾಧ್ಯಕ್ಷ ಪೃಥ್ವಿರಾಜ್ ಬಾದಾಮಿ ಅವರು ಕಾರ್ಯಕ್ರಮದ ವಿವರವನ್ನು ಸಭೆಗೆ ತಿಳಿಸಿದರು. ಲೈಫ್ ಲೈನ್ ಸಂಸ್ಥೆಯ ಹಿರಿಯ ರಕ್ತದಾನಿ ಆದಿಕೇಶವ ಪ್ರಕಾಶ್ ರಕ್ತದಾನದ ಬಗ್ಗೆ ಅತ್ಯಮೂಲ್ಯ ಮಾಹಿತಿ ಗಳನ್ನು ಮತ್ತು ಸಲಹೆಗಳನ್ನು ನೀಡಿದರು.

ರಕ್ತದಾನ ಮಾಡುವುದರಿಂದ ಅನುಕೂಲಗಳನ್ನು ಸಹ ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ವಿದ್ಯಾರ್ಥಿಗಳಿಗೆ ಹಾಗೂ ಪ್ರಾಧ್ಯಾಪಕರಿಗೆ ತಿಳಿಸಿದರು. ನಂತರ ವಿದ್ಯಾರ್ಥಿಯರಿಗೆ ಮತ್ತು ಪ್ರಾಧ್ಯಾಪಕರಿಗೆ ಕು. ಐಶ್ವರ್ಯ ಅವರು ವಿದ್ಯಾರ್ಥಿನಿಯರು ಮತ್ತು ಮಹಿಳೆಯರು ಯಾವ ಸಂದರ್ಭದಲ್ಲಿ ರಕ್ತದಾನ ಮಾಡಬಹುದು ರಕ್ತದಾನ ಮಾಡುವುದರಿಂದ ಮಹಿಳೆಯರಿಗೆ ಉಪಯೋಗಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.

ಮಾಧವ ಪ್ರಸಾದ್ ಪದಕಿ ಅವರು ಸಂಸ್ಥೆಯ ಬಗ್ಗೆ ಹಾಗೂ ಸಂಸ್ಥೆಗಳಿಂದ ನಡೆಯುತ್ತಿರುವ ವಿವಿಧ ಸಾಮಾಜಿಕ ಚಟುವಟಿಕೆಗಳ ಬಗ್ಗೆ ಸಭೆಯ ಗಮನಕ್ಕೆ ತಂದರು.ಈ ಸಂದರ್ಭದಲ್ಲಿ ಸಂಸ್ಥೆ ಕಾರ್ಯದರ್ಶಿ ಅನಿಲ್ ಬಾರಂಗೆಳ್, ಖಜಾಂಚಿ ಡಿ. ಶೇಷಾಚಲ, ಸಂಘಟನಾ ಕಾರ್ಯದರ್ಶಿ ಗಾಯಕ್ವಾಡ್ ಸಂತೋಷ್, ಗೋಪಾಲಕೃಷ್ಣ ಹಾಜರಿದ್ದರು.

# ಮಹಿಳಾ ಹಕ್ಕುಗಳ ದಮನ

**(1ನೇ ಪುಟದಿಂದ)** ಹೆಚ್ಚಾಗುತ್ತಿದೆ.

ಲಿಂಗ ಭೇದ ನೀತಿ ವಿರುದ್ಧದ ಅಂತರರಾಷ್ಟ್ರೀಯ ಕಾನೂನು ರೂಪಿಸುವ ಬಗ್ಗೆ ಸ್ಪಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಇದಕ್ಕಾಗಿ ಭದ್ರತಾ ಮಂಡಳಿ ಬೆಂಬಲ ನೀಡಬೇಕಿದೆ ಎಂದು ಸೀಮಾ ಒತ್ತಾಯಿಸಿದ್ದಾರೆ.

ಪ್ರಸಕ್ತ ಸರ್ಕಾರಿ ಪ್ರಾಯೋಜಿತ ಲಿಂಗ ಭೇದ ನೀತಿಯನ್ನು ಎದುರಿಸಲು ಯಾವುದೇ ಅಂತರರಾಷ್ಟ್ರೀಯ ಕಾನೂನು ಇಲ್ಲ. ತಾಲಿಬಾನ್ ವ್ಯವಸ್ಥಿತವಾಗಿ ಹಾಗೂ ಯೋಜಿತವಾಗಿ ಮಹಿಳಾ ಹಕ್ಕುಗಳ ಮೇಲೆ ದಾಳಿ ನಡೆಸುತ್ತಿದೆ. ಜಾಗತಿಕವಾಗಿ ಇದರ ವಿರುದ್ಧ ಸೂಕ್ತ ರೀತಿಯಲ್ಲಿ ಸ್ಪಂದಿಸಬೇಕಿದೆ ಎಂದವರು ಆಗ್ರಹಿಸಿದ್ದಾರೆ.

2021ರಲ್ಲಿ ಆಫ್ಘಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ತೆಗೆದು ಕೊಂಡಿತ್ತು. ನಂತರ ಆಫ್ಘಾನಿಸ್ತಾನದಲ್ಲಿ ಷರಿಯಾ ಹೇರಲಾಗಿದೆ. ವಿದ್ಯಾರ್ಥಿನಿಯರು ಆರನೇ ತರಗತಿಯ ನಂತರ ಶಾಲೆಗಳಿಗೆ ಬರದಂತೆ ನಿರ್ಬಂಧಿಸಲಾಗಿದೆ. ಬಹುತೇಕ ಹುದ್ದೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರನ್ನು ನಿರ್ಬಂಧಿಸಲಾಗಿದೆ.



ಕೊಡಗನೂರು ಸರ್ಕಾರಿ ಪ್ರಾಥಮಿಕ ಶಾಲೆಗೆ ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ ನೀಡಿ ಮಕ್ಕಳಿಗೆ ಬಡಿಸಿದ ಬಿಸಿಯೂಟ ಪರಿಶೀಲಿಸಿದರು.

# ಅವ್ಯವಸ್ಥೆಗೆ ಶಾಸಕರ ದಿಗ್ಭ್ರಮೆ!

**(1ನೇ ಪುಟದಿಂದ)** ಕೊಡಬೇಕೆಂದು ಸೂಚಿಸಿದರು.

ಈ ಸಂದರ್ಭದಲ್ಲಿ ಅಶೋಕ್, ರಾಜಶೇಖರ್, ರೇವಣಸಿದ್ದಪ್ಪ, ಕುಬೇರಪ್ಪ, ಲಕ್ಷ್ಮಣ, ಸುರೇಶ , ಗ್ರಾಪಂ ಅಧ್ಯಕ ಸಿದ್ದಪ್ಪ, ವಿಜಯಣ್ಣ, ಎಸ್ ಡಿಎಂಸಿ ಅಧ್ಯಕ್ಷ ವಾಸು, ಗ್ರಾ.ಪಂ. ಸದಸ್ಯ ಬಾಬು, ನಾಗರಾಜ್,ಯುವರಾಜ್, ಪ್ರಕಾಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ಸಿದ್ದಪ್ಪ, ಬಸವ ರೆಡ್ಡಿ ಸೇರಿದಂತೆ ಇನ್ನಿತರರಿದ್ದರು.

# ಇರಾಕ್ : ಮದುವೆ ಮಂಟಪದಲ್ಲಿ ಬೆಂಕಿ, 100 ಸಾವು

ಮೊಸುಲ್ (ಇರಾಕ್), ಸೆ. 27 – ಉತ್ತರ ಇರಾಕ್‌ನ ಮದುವೆ ಮಂಟಪದಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ 100ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ ಹಾಗೂ 150 ಇತರರು ಗಾಯಗೊಂಡಿದ್ದಾರೆ. ಪಟಾಕಿ ಕಾರಣದಿಂದ ಬೆಂಕಿ ಹತ್ತಿಕೊಂಡಿರಬಹುದು ಎಂದು ಶಂಕಿಸಲಾಗಿದೆ.

ಮೊಸುಲ್ ನಗರದ ಹೊರ ವಲಯದ ಹಮ್ದನಿಯ ಪ್ರದೇಶದಲ್ಲಿ ಬೆಂಕಿ ಅನಾಹುತ ಸಂಭವಿಸಿದೆ.

ಬೆಂಕಿಯು ಪ್ಲಾಸ್ಟಿಕ್ ಅಲಂಕೃತ ತಾರಸಿಗೆ ಹರಡಿ, ತಾರಸಿ ಕುಸಿದು ಬಿದ್ದಿತು. ಇದರಿಂದಾಗಿ ಹೊರ ಹೋಗುವ ದಾರಿ ಮುಚ್ಚಲ್ಪಟ್ಟಿತ್ತು ಎಂದು ಮದುವೆಯಲ್ಲಿ ಭಾಗಿಯಾಗಿದ್ದ ಫತೇನ್ ಯೂಸೆಫ್ ತಿಳಿಸಿದ್ದಾರೆ.

ಕಲ್ಯಾಣ ಮಂಟಪದಲ್ಲಿ ನಿಷೇಧಿತ ದಹನಕಾರಿ ವಸ್ತುಗಳನ್ನು ಬಳಸಲಾಗಿತ್ತು ಎಂಬುದು ಆರಂಭಿಕ ತನಿಖೆಯಿಂದ ತಿಳಿದು ಬಂದಿದೆ. ಬೆಂಕಿಯ ನಂತರ ಕಲ್ಯಾಣ ಮಂಟಪದ ಭಾಗಗಳು ಕುಸಿದಿವೆ. ಇರಾಕ್‌ನಲ್ಲಿ ಅದ್ಧೂರಿ ಮದುವೆಗಳು ಸಾಮಾನ್ಯವಾಗಿವೆ. ಮದುವೆಯಲ್ಲಿ ಗಂಡು ಹಾಗೂ ಹೆಣ್ಣಿನ ಕಡೆಯ ನೂರಾರು ಜನರು ಭಾಗಿಯಾಗಿರುತ್ತಾರೆ.

# ಅರ್ಬನ್ ಬ್ಯಾಂಕ್‌ನ ಶಾಖೆ ಉದ್ಘಾಟನೆ

**(1ನೇ ಪುಟದಿಂದ)** ಈ ಸಂದರ್ಭದಲ್ಲಿ ಬ್ಯಾಂಕ್‌ನ ಉಪಾಧ್ಯಕ್ಷೆ ಜಯಮ್ಮ ಪರಶುರಾಮಪ್ಪ, ನಿರ್ದೇಶಕರಾದ ಕಿರುವಾಡಿ ವಿ. ಸೋಮಶೇಖರ್, ಕುಬೇರಪ್ಪ ಎ.ಹೆಚ್., ಶಂಕರ್ ಖಟಾವ್‌ಕರ್, ಪ್ರಭು ಪ್ರಸಾದ್ ಎಸ್.ಕೆ., ಜ್ಯೋತಿ ಪ್ರಕಾಶ್ ಕೆ.ಎಂ., ಚಿದಾನಂದಪ್ಪ ಬಿ., ವೆಂಕಪ್ಪ ಪಿ.ಹೆಚ್., ನಾಗೇಂದ್ರಚಾರಿ ಬಿ., ಕೊಟ್ರೇಶ್ ಎ., ಉಮಾ ವಾಗೀಶ್, ವಿಶಾಲ್ ಕುಮಾರ್ ಆರ್. ಸಂಘವಿ, ಅನಿತಾ ಕೋಗುಂಡಿ ಪ್ರಕಾಶ್, ಅನುಷಾ ಡಾ॥ ವೀರೇಂದ್ರ ಸ್ವಾಮಿ, ವೃತ್ತಿಪರ ನಿರ್ದೇಶಕರಾದ ಶಿರಸಾಲಿಮಠ್ ಆರ್.ವಿ. ಹಾಗೂ ಕಿರಣ್ ಆರ್. ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

# ಉತ್ತರ ಆಫ್ರಿಕಾದಿಂದ ಚೀತಾ ಆಮದಿಗೆ ಚಿಂತನೆ

ನವದೆಹಲಿ, ಸೆ. 27-ನಮೀಬಿಯ ಹಾಗೂ ದಕ್ಷಿಣ ಆಫ್ರಿಕಾದಿಂದ ತರಿಸಲಾದ ಚೀತಾಗಳು ಬೇಸಿಗೆಯಲ್ಲಿ ಸಮಸ್ಯೆ ಎದುರಿಸುತ್ತಿವೆ. ಈ ಹಿನ್ನೆಲೆಯಲ್ಲಿ ಉತ್ತರ ಆಫ್ರಿಕಾದಿಂದ ಚೀತಾಗಳನ್ನು ಆಮದು ಮಾಡಿಕೊಳ್ಳಲು ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೇಸಿಗೆ ಹಾಗೂ ಮಳೆಗಾಲದ ವೇಳೆ ಚೀತಾಗಳು ಚಳಿಗಾಲದ ತುಪ್ಪಳ ಬೆಳೆಸಿಕೊಂಡಿವೆ. ಇದರಿಂದಾಗಿ ಚೀತಾಗಳು ಸಮಸ್ಯೆ ಎದುರಿಸಬೇಕಾಯಿತು. ಆಫ್ರಿಕಾದಲ್ಲಿ ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಚಳಿಗಾಲ ಇರುತ್ತದೆ. ಆಫ್ರಿಕಾದ ಪರಿಣಿತರೂ ಸಹ ಚೀತಾಗಳಲ್ಲಿ ಈ ಪರಿಸ್ಥಿತಿ ಎದುರಾಗಬಹುದು ಎಂದು ನಿರೀಕ್ಷಿಸಿರಲಿಲ್ಲ. ಚಳಿಗಾಲದ ತುಪ್ಪಳ ಬೆಳೆಸಿಕೊಳ್ಳುವ ಜೊತೆಗೆ, ಭಾರತದಲ್ಲಿ ಆ ವೇಳೆಗೆ ತಾಪಮಾನ ಹೆಚ್ಚಾಗಿತ್ತು. ಇದು ತುರಿಕೆಗೆ ಕಾರಣವಾಗಿ ಪ್ರಾಣಿಗಳು ಗಾಯಗೊಂಡವು. ಇದು ಸೋಂಕಿಗೆ ಕಾರಣವಾಗಿ ಮೂರು ಚೀತಾಗಳು ಸಾವನ್ನಪ್ಪಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆಫ್ರಿಕಾದ ಉತ್ತರ ಹಾಗೂ ಈಶಾನ್ಯ ಭಾಗದ ಚೀತಾಗಳು ಭಾರತದ ಪರಿಸ್ಥಿತಿಗೆ ಹೆಚ್ಚು ಹೊಂದಿಕೊಳ್ಳುತ್ತವೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಪ್ರಾಣಿಗಳ ಆರೋಗ್ಯ, ಜೀವನ ಶೈಲಿ ಇತ್ಯಾದಿಗಳನ್ನು ಪರಿಗಣಿಸಬೇಕಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬ್ರಿಟನ್ ಹಾಗೂ ಅಮೆರಿಕಗಳು ಉತ್ತರ ಆಫ್ರಿಕಾದಿಂದ ಚೀತಾ ಆಮದು ಮಾಡಿಕೊಂಡಿವೆ. ಅಲ್ಲಿನ ಪರಿಣಿತರೂ ಸಹ, ಇದೇ ಭಾಗದಿಂದ ಆಮದಿಗೆ ಸಲಹೆ ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿಂದೆ ಉತ್ತರ ಆಫ್ರಿಕಾದಲ್ಲಿ ಹೆಚ್ಚು ಚಿರತೆಗಳಿದ್ದವು. ಇತ್ತೀಚಿನ ದಿನಗಳಲ್ಲಿ ಈ ದೇಶಗಳಲ್ಲಿ ಚೀತಾಗಳ ಪ್ರಮಾಣ ಗಣನೀಯವಾಗಿ ಇಳಿಕೆಯಾಗಿದೆ. ಕೆಲ ದೇಶಗಳಲ್ಲಿ ಚೀತಾಗಳು ಸಂಪೂರ್ಣ ಕಣ್ಮರೆಯಾಗಿವೆ. ಕೆಲ ರಕ್ಷಿತ ಅಭಯಾರಣ್ಯಗಳಲ್ಲಿ ಮಾತ್ರ ಚೀತಾಗಳು ಉಳಿದುಕೊಂಡಿವೆ.

# ಗುಣಮಟ್ಟದ ಬೀಜ, ವೈಜ್ಞಾನಿಕ ತಾಂತ್ರಿಕತೆ ಅಳವಡಿಸಿದರೆ ಉತ್ತಮ ಇಳುವರಿ

ದಾವಣಗೆರೆ,ಸೆ.27-ಉತ್ತಮ ಗುಣಮಟ್ಟದ ಬೀಜ ಮತ್ತು ವೈಜ್ಞಾನಿಕ ತಾಂತ್ರಿಕತೆಗಳನ್ನು ಅಳವಡಿಸಿಕೊಂಡರೆ ಉತ್ತಮ ಇಳುವರಿ ಪಡೆಯಲು ಸಾಧ್ಯ, ಇದಕ್ಕೆ ಉದಾರಣೆಯೆಂದರೆ ಈರುಳ್ಳಿಯ ಭೀಮಾ ಸೂಪರ್ ತಳಿಯ ಈ ವರ್ಷದ ಉತ್ಪಾದಕತೆಯೇ ಸಾಕ್ಷಿ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥ ಡಾ. ದೇವರಾಜ ಟಿ.ಎನ್ ತಿಳಿಸಿದರು.



ಬಿದರಕೆರೆಯ 'ಈರುಳ್ಳಿ ಬೆಳೆ ಕ್ಷೇತ್ರೋತ್ಸವ'ದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ದೇವರಾಜ ಟಿ.ಎನ್

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ, ಬಿದರಕೆರೆ ತರಳಬಾಳು ರೈತ ಉತ್ಪಾದಕ ಕಂಪನಿ, ಬಿದರಕೆರೆ ಹಾಗೂ ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಜಗಳೂರು ಇವರು ಹಮ್ಮಿಕೊಂಡಿದ್ದ 'ಈರುಳ್ಳಿ ಬೆಳೆ ಕ್ಷೇತ್ರೋತ್ಸವ' ಉದ್ಘಾಟಿಸಿ ಮಾತನಾಡಿದರು.

ಬೀಜೋಪಚಾರ, ಸಮಗ್ರ ಪೋಷಕಾಂಶ ನಿರ್ವಹಣೆ ಮತ್ತು ಕೀಟ ಹಾಗೂ ರೋಗ ನಿರ್ವಹಣಾ ಕ್ರಮಗಳನ್ನು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಮಾರ್ಗದರ್ಶನದಿಂದ ರೈತರು ಅನುಸರಿಸಿರುವುದರಿಂದ ಇಂದು ಉತ್ತಮ ಬೆಳೆ ಬಂದಿದೆ. ಇಳುವರಿಯ ಜೊತೆಗೆ ಮೌಲ್ಯವರ್ಧನೆ, ಸಂಸ್ಕರಣೆ ಹಾಗೂ ಗ್ರೇಡಿಂಗ್ ತಂತ್ರಜ್ಞಾನಗಳನ್ನು ತೋಟಗಾರಿಕೆ ಬೆಳೆಗಳಲ್ಲಿ ಅನುಸರಿಸುವುದರಿಂದ ಬೆಳೆಗೆ ಉತ್ತಮ ಬೆಲೆ ನಿರ್ಧಾರ ಮಾಡಲು ಸಹಾಯವಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಬಸವನಗೌಡ ಎಂ.ಜಿ, ಕಲ್ಲೇದೇವರಪುರ ಗ್ರಾಮದಲ್ಲಿ ಆಯ್ದ ರೈತರಿಗೆ ಭೀಮಾ ಸೂಪರ್ ತಳಿಯನ್ನು ಪ್ರಾತ್ಯಕ್ಷಿಕೆಗೆ ನೀಡಲಾಗಿದ್ದು, ರೈತರು ನಮ್ಮ ಮಾರ್ಗದರ್ಶನದಲ್ಲಿ ಟ್ರೈಕೋಡರ್ಮಾ ಬೀಜಜೋಪಚಾರ, ಮಣ್ಣು ಪರೀಕ್ಷೆಯ ಆಧಾರದ ಮೇಲೆ ಪೋಷಕಾಂಶಗಳ ಬಳಕೆ, ಕೀಟ ನಿರ್ವಹಣೆಗೆ ಹಳದಿ ಮತ್ತು ನೀಲಿ ಅಂಟು ಪಟ್ಟಿಯ ಬಳಕೆ, ಸಮಗ್ರ ರೋಗ ಮತ್ತು ಕೀಟ ನಿರ್ವಹಣೆ ಕ್ರಮಗಳನ್ನು ಅನುಸರಿಸುವುದರಿಂದ ಇಂದು ಎಕರೆಗೆ 170 ಚೀಲ ಇಳುವರಿಯನ್ನು ಪಡೆದಿರುವುದು ಸಂತಸ ತಂದಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಉತ್ತಮ ತಳಿಯ ಈರುಳ್ಳಿ ಬೀಜವನ್ನು ಬಿದರಕೆರೆ ರೈತ ಉತ್ಪಾದಕ ಕಂಪನಿಯ ವತಿಯಿಂದ ಮಾರಾಟಕ್ಕೆ ಒದಗಿಸಲಾಗುವುದು ಎಂದು ತಿಳಿಸಿದರು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ತೋಟಯ್ಯ ಜಿ. ಮಾತನಾಡಿ, ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಖುಷ್ಕಿ ತೋಟಗಾರಿಕೆಗೆ ಅನುದಾನ ಲಭ್ಯವಿದ್ದು, ಇದರ ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ವಿಜ್ಞಾನಿ ಮಲ್ಲಿಕಾರ್ಜುನ ಬಿ.ಓ., ಬಿದರಕೆರೆ ತರಳಬಾಳು ರೈತ ಉತ್ಪಾದಕ ಕಂಪನಿಯ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷ ಸೋಮನಗೌಡ, ನಿರ್ದೇಶಕ ಕೃಷ್ಣಮೂರ್ತಿ, ರೈತರು ಕಾರ್ಯಕ್ರಮದಲ್ಲಿ ಹಾಜರಿದ್ದರು.


## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಛೇರಿ, ನಂ.120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ–577 001

### ಡಿಮಾಂಡ್ ನೋಟೀಸ್

ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮಗಳು 2002 ರ ನಿಯಮ 3 ರ ಅನ್ವಯ ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅಡಿಯಲ್ಲಿ 13(2) ರ ಅಡಿಯಲ್ಲಿ ಕೆಳ ಸಹಿದಾರರು ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಅಧಿಕೃತ ಅಧಿಕಾರಿಯಾಗಿರುವುದರಿಂದ ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅಡಿಯಲ್ಲಿ ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮ 2002ರ ನಿಯಮ 3ರ ಅನ್ವಯ ಸೆಕ್ಷನ್ 13(2)ರ ಅಡಿಯಲ್ಲಿ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ ಡಿಮಾಂಡ್ ನೋಟೀಸನ್ನು ನೀಡಿ ಈ ಕೆಳಗೆ ಪಟ್ಟಿ ಮಾಡಿರುವ ಸಾಲಗಾರರು/ಅಥವಾ ಸಹ ಸಾಲಗಾರರು/ಅಥವಾ ಅಧಿಕೃತ ಉತ್ತರಾಧಿಕಾರಿಗಳು ಕೆಳಗೆ ಕೊಟ್ಟಿರುವ ವಿವರಗಳ ಪ್ರಕಾರ ಪರಸ್ಪರ ಡಿಮಾಂಡ್ ನೋಟೀಸ್‌ಗಳಲ್ಲಿ ತಿಳಿಸಿರುವ ಮೊಬಲಗುಗಳನ್ನು, ಪರಸ್ಪರ ನೋಟೀಸ್‌ಗಳ ದಿನಾಂಕದಿಂದ 60 ದಿನಗಳ ಒಳಗಾಗಿ ಪಾವತಿ ಮಾಡಲು ಕರೆ ನೀಡಲಾಗಿದೆ. ಮೇಲೆ ತಿಳಿಸಿದ ನೋಟೀಸ್‌ಗಳ ಪ್ರತಿಗಳನ್ನು ಕೆಳ ಸಹಿದಾರರಿಂದ ಪಡೆಯಬಹುದು ಮತ್ತು ಮೇಲೆ ತಿಳಿಸಿದ ಸಾಲಗಾರರು ಇಚ್ಛೆ ಪಟ್ಟಲ್ಲಿ ಸಂಬಂಧಪಟ್ಟ ಪ್ರತಿಯನ್ನು ಕೆಳ ಸಹಿದಾರರಿಂದ ಯಾವುದೇ ಕೆಲಸದ ದಿನದಂದು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಮೇಲಿನದಕ್ಕೆ ಸಂಬಂಧಿಸಿದಂತೆ ಈ ಕೆಳಗೆ ತಿಳಿಸಿದ ಸಾಲಗಾರರಿಗೆ ಮತ್ತೊಮ್ಮೆ ನೋಟೀಸ್ ನೀಡಿ ಈ ನೋಟೀಸ್ ದಿನಾಂಕದಿಂದ 60 ದಿನಗಳ ಒಳಗಾಗಿ ಕೆಳಗೆ ಪರಸ್ಪರ ಹೆಸರುಗಳಲ್ಲಿ ಸೂಚಿಸಿದ ಮೊಬಲಗುಗಳನ್ನು, ಈ ಕೆಳಗೆ ತಿಳಿಸಿದ ಸಾಲಗಾರರು ನಿರ್ವಹಿಸಲಾದ ಸಾಲದ ಒಪ್ಪಂದ ಮತ್ತು ಇತರ ದಸ್ತಾವೇಜು/ಬರಹಗಳು ಯಾವುದೇ ಇದ್ದಲ್ಲಿ ಇವುಗಳ ಅನ್ವಯ ಕೆಳಗೆ ಕಲಂ (ಸಿ) ನಲ್ಲಿ ತಿಳಿಸಿದ ಪರಸ್ಪರ ದಿನಾಂಕಗಳಿಂದ ಹಣ ಪಾವತಿ ಮಾಡುವ ದಿನಾಂಕದವರೆಗೆ ಮತ್ತು / ಅಥವಾ ವಸೂಲಾಗುವವರೆಗೆ ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಸಂದಾಯ ಮಾಡುವಂತೆ ನೋಟೀಸ್ ನೀಡಲಾಗಿದೆ. ವಿದ್ಯುಕ್ತವಾಗಿ ಸಾಲ ಮರುಪಾವತಿ ಮಾಡುವ ಬಗ್ಗೆ ಭದ್ರತೆಯಾಗಿ ಕೆಳಕಂಡ ಭದ್ರತೆ ಪಡೆದ ಆಸ್ತಿಗಳನ್ನು ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಮೇಲೆ ತಿಳಿಸಿದ ಪರಸ್ಪರ ಸಾಲಗಾರರು ಅಡಮಾನ ಮಾಡಿರುತ್ತಾರೆ.

| ಕ್ರಸಂ. | ಸಾಲಗಾರರು/ಸಹಸಾಲಗಾರರು/ ಜಾಮೀನುದಾರರು | ಖಾತೆ ಸಂಖ್ಯೆ ಮತ್ತು ಬಾಕಿ ಇರುವ ಮೊತ್ತ | ಡಿಮಾಂಡ್ ನೋಟೀಸಿನ ದಿನಾಂಕ | ಸ್ಥಿರಾಸ್ತಿಗಳ/ಭದ್ರತಾ ಆಸ್ತಿಗಳ ವಿವರ |
|---|---|---|---|---|
| (ಎ) | (ಬಿ) | (ಸಿ) | (ಡಿ) | (ಇ) |
| (1) | ಮೆ॥ ಎ.ಆರ್.ಪಿ. ಮಾರ್ಕೇಟಿಂಗ್ **ಮಾಲೀಕರು:-** 1) ಎ.ಆರ್. ರೇವಣಸಿದ್ದಪ್ಪ ಬಿನ್ ಪತ್ರೆಪ್ಪ ಎ.ಆರ್. **ಜಾಮೀನುದಾರರು:** 1)ಉಜ್ಜೀನಪ್ಪ. ಎ.ಆರ್. ಬಿನ್ ಬಸಪ್ಪ. 2)ಶಾಮನೂರು ಸಿದ್ದಪ್ಪ ಬಿನ್ ಶಿವಲಿಂಗಪ್ಪ | ಎಂಓಎಲ್.–317 ರೂ.36,69,365–00 + ಇತರೆ ಖರ್ಚು, (ದಿನಾಂಕ 25–09–2023 ರ ವರೆಗೆ) | 27–09–2023 | **ಆಸ್ತಿ ನಂ.1:-** ದಾವಣಗೆರೆ ನಗರದ 5ನೇ ವಾರ್ಡ್, 7ನೇ ಡಿವಿಜನ್, ಎ.ಪಿ.ಎಂ.ಸಿ. ರೈಸ್ ಮಾರ್ಕೇಟ್, ಎಫ್ ಬ್ಲಾಕ್, ಈರುಳ್ಳಿ ಮಾರ್ಕೇಟ್ ಎದುರು, ದಾವಣಗೆರೆ ಸೈಟ್ ನಂ.ಎಫ್ 1, ದಾವಣಗೆರೆ ಮಹಾನಗರಪಾಲಿಕೆ ಚಾಲ್ತಿ ಡೋರ್ ನಂ.82/ಎಫ್–01, ಅಳತೆ 6.7052 X 8.8387 ಮೀಟರ್ಸ್ (22 X 29 ಅಡಿಗಳು) ಅಡಿಗಳಲ್ಲಿರುವ ವಾಣಿಜ್ಯ ಮಳಿಗೆ ಇದರ ಚೆಕ್ಕುಬಂದಿ:– ಪೂರ್ವಕ್ಕೆ : ಎ.ಪಿ.ಎಂ.ಸಿ. ರಸ್ತೆ ಪಶ್ಚಿಮಕ್ಕೆ : ಎ.ಪಿ.ಎಂ.ಸಿ. ಖಾಲಿ ನಿವೇಶನ, ಉತ್ತರಕ್ಕೆ : ಗೋಡಾನ್ ನಂ.ಇ18, ದಕ್ಷಿಣಕ್ಕೆ : ಖಾಲಿ ನಿವೇಶನ ಸಂ.ಎಫ್2. **ಆಸ್ತಿ ನಂ.2:-** ದಾವಣಗೆರೆ ನಗರದ ಆನೆಕೊಂಡ, ಕಸಬಾ ಹೋಬಳಿ, (ತೋಳಹುಣುಸೆ ಮಂಡಲ್ ಪಂಚಾಯತ್), ಖಾನೆಸುಮಾರಿ ಯಾನೆ ಡೋರ್ ನಂ.473/58, ಖಾತಾ ನಂ.753, ಅಳತೆ 18 X 80 ಅಡಿಗಳಲ್ಲಿರುವ ಸೊತ್ತಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಗವಿಯಪ್ಪನವರ ಮನೆ, ಪಶ್ಚಿಮಕ್ಕೆ : ಇಂದ್ರ ರಾಜಪ್ಪನವರ ಮನೆ, ಉತ್ತರಕ್ಕೆ : ಕನ್ಸರ್‌ವೆನ್ಸಿ, ದಕ್ಷಿಣಕ್ಕೆ : ರಸ್ತೆ. |

* ಅನ್ವಯವಾಗುವಂತೆ ಮುಂಬರುವ ಹೆಚ್ಚಿನ ವಾರ್ಷಿಕ ಬಡ್ಡಿ, ಸುಸ್ತಿ ಬಡ್ಡಿ, ಪ್ರಾಸಂಗಿಕ ವೆಚ್ಚಗಳು, ಖರ್ಚುಗಳು, ಚಾರ್ಜ್‌ಗಳು ಇತ್ಯಾದಿ ಹಣ ಪಾವತಿ ಮತ್ತು ವಸೂಲಿ ದಿನಾಂಕದವರೆಗೆ ಭರಿಸಬೇಕಾಗುವುದು.

ಇದರೊಂದಿಗೆ ಮೇಲೆ ತಿಳಿಸಿದ ಸಾಲಗಾರರು ಪೂರ್ವೋಕ್ತ ರೀತಿಯಲ್ಲಿ ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಹಣ ಪಾವತಿಸಲು ವಿಫಲರಾದಲ್ಲಿ ಆಗ ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನವರು ಮೇಲೆ ತಿಳಿಸಿದ ಭದ್ರತೆ ಪಡೆದ ಆಸ್ತಿ/ಸ್ಥಿರಾಸ್ತಿಗಳ ವಿರುದ್ಧ ಸದರಿ ಕಾಯ್ದೆಯ ಸೆಕ್ಷನ್ 13(4)ರ ಅಡಿಯಲ್ಲಿ ಮತ್ತು ಅನ್ವಯವಾಗುವ ನಿಯಮಗಳ ಮೇರೆಗೆ ವೆಚ್ಚಗಳು ಮತ್ತು ಪರಿಣಾಮಗಳಿಗೆ ಸದರಿ ಸಾಲಗಾರರು ಸಂಪೂರ್ಣವಾಗಿ ಹೊಣೆಗಾರರಾಗಿರುವರು.

ಮೇಲೆ ತಿಳಿಸಿದ ಸಾಲಗಾರರು ಮೇಲೆ ತಿಳಿಸಿದ ಕಾಯ್ದೆಯ ಅಡಿಯಲ್ಲಿ ಪೂರ್ವೋಕ್ತ ಭದ್ರತೆ ಪಡೆದ ಆಸ್ತಿ/ಸ್ಥಿರಾಸ್ತಿಯನ್ನು, ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಪೂರ್ವಾನುಮತಿಯನ್ನು ಲಿಖಿತವಾಗಿ ಪಡೆಯದೇ ಮಾರಾಟ, ಗುತ್ತಿಗೆ ಅಥವಾ ಕಾಯ್ದೆಯ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಕೊಡಲಾದಂತೆ ಕಾರಾವಾಸ ಮತ್ತು / ಅಥವಾ ದಂಡಕ್ಕೆ ಬದ್ದನಾಗಿರತಕ್ಕದ್ದು. ಸಹಿ/–

ಸ್ಥಳ: ದಾವಣಗೆರೆ
ದಿನಾಂಕ: 27–09–2023

**ಅಧಿಕೃತ ಅಧಿಕಾರಿ**
ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

## ಬಿಐಜೆಎಸ್‌ಎಸ್ ಮಹಾವಿದ್ಯಾಲಯಕ್ಕೆ ಕಬಡ್ಡಿಯಲ್ಲಿ ದ್ವಿತೀಯ ಸ್ಥಾನ



**ರಾಣೇಬೆನ್ನೂರು**

ರಾಣೇಬೆನ್ನೂರು, ಸೆ. 27- ತಾಲ್ಲೂಕು ದಸರಾ ಕ್ರೀಡಾಕೂಟದಲ್ಲಿ ಇಲ್ಲಿನ ಬಿಐಜೆಎಸ್‌ಎಸ್ ಮಹಿಳಾ ಮಹಾವಿದ್ಯಾಲಯ ಕಬಡ್ಡಿಯಲ್ಲಿ ದ್ವಿತೀಯ ಸ್ಥಾನ ಪಡೆದಿದೆ. ಕ್ರೀಡಾ ಪಟುಗಳಿಗೆ ಬಿ.ಎ.ಜೆ.ಎಸ್.ಎಸ್. ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಡಾ. ಆರ್.ಎಂ. ಕುಬೇರಪ್ಪ ಅಭಿನಂದಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಾಚಾರ್ಯರಾದ ಡಾ. ಸುರೇಶ್ ಬಿ. ಬಣಕಾರ, ದೈಹಿಕ ಶಿಕ್ಷಣ ನಿರ್ದೇಶಕರಾದ ಎಸ್.ಎಚ್. ಹುಚ್ಚ ಗೊಂಡರ, ಅಭಿಷೇಕ ಅಡ್ಡೇರ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ದಸರಾ ಕ್ರೀಡಾಕೂಟದಲ್ಲಿ ಜಿಎಂಐಟಿ ವಿದ್ಯಾರ್ಥಿಗಳ ಸಾಧನೆ




ದಾವಣಗೆರೆ, ಸೆ. 27- ಜಿ.ಪಂ. ದಾವಣಗೆರೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ದಾವಣಗೆರೆ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಹಾಲೇಶ್ ಕುಮಾರ್ ಕೆ.ಜಿ. (100ಮೀ. ಪ್ರಥಮ) ಮತ್ತು ಅಕ್ಷಯ್ ಎಸ್.ಕೆ. (100ಮೀ. ದ್ವಿತೀಯ ಮತ್ತು 200.ಮೀ ದ್ವಿತೀಯ) ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿರುತ್ತಾರೆ.

ಈ ಕ್ರೀಡಾಪಟುವಿಗೆ ಕಾಲೇಜಿನ ನಿರ್ವಹಣಾ ಪ್ರತಿನಿಧಿ ವೈ.ಯು. ಸುಭಾಶ್ಚಂದ್ರ, ಪ್ರಾಂಶುಪಾಲ ಡಾ. ಎಂ.ಬಿ. ಸಂಜಯ್ ಪಾಂಡೆ ಹಾಗೂ ಕ್ರೀಡಾ ಸಂಯೋಜಕ ಡಾ. ಹೆಚ್.ಎಸ್. ಕಿರಣ್‌ಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕ ಜಿ.ಬಿ. ಅಜ್ಜಯ್ಯ, ಕ್ರೀಡಾ ಸಹಾಯಕ ವೈ. ಹನುಮಂತಪ್ಪ ಅಭಿನಂದಿಸಿದ್ದಾರೆ.

## ಗುರು ಭವನದಲ್ಲಿ ಮಾರಾಟ ಮೇಳ

ದಾವಣಗೆರೆ, ಸೆ. 27- ನಗರದ ಗುರು ಭವನದಲ್ಲಿ ವಿವಿಧ ಉಡುಪುಗಳ ಮಾರಾಟ ಮೇಳವನ್ನು ಆಯೋಜಿಸಲಾಗಿದ್ದು, ಈ ಮಾರಾಟ ಮೇಳವು ಬಹುಜನರ ಅಪೇಕ್ಷೆಯ ಮೇರೆಗೆ ಇನ್ನು ಕೆಲವು ದಿನ ನಡೆಯಲಿದೆ. ಬ್ರಾಂಡೆಡ್ ಕಂಪನಿಗಳ ಉಡುಪುಗಳು ಮಕ್ಕಳು, ಯುವಕರು, ಪುರುಷರು, ವಯೋವೃದ್ಧರು, ಹೀಗೆ ಎಲ್ಲ ವರ್ಗದವರಿಗೂ ಲಭ್ಯವಿದ್ದು, ಭಾರೀ ರಿಯಾಯಿತಿ ನೀಡಲಾಗಿದೆ. ಪುರುಷರ ಹಾಗೂ ಮಹಿಳೆಯರ ಪ್ರತ್ಯೇಕ ಕೌಂಟರ್‌ಗಳು ಲಭ್ಯವಿವೆ.



# ಸ್ಟಾಲಿನ್ ಓಲೈಕೆಗಾಗಿ ರೈತರ ಜೊತೆ ಚೆಲ್ಲಾಟ

**ಕುಮಾರಸ್ವಾಮಿ, ಯಡಿಯೂರಪ್ಪ ತರಾಟೆ**

ಬೆಂಗಳೂರು, ಸೆ.27 - ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಓಲೈಕೆ ಮಾಡಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನಮ್ಮ ರೈತರ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಬಿ.ಎಸ್.ಯಡಿಯೂರಪ್ಪ ಇಂದಿಲ್ಲಿ ಕಿಡಿ ಕಾರಿದ್ದಾರೆ.

ಕಾವೇರಿ ನದಿಯಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯದ ಕ್ರಮವನ್ನು ವಿರೋಧಿಸಿ ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ಪ್ರತಿಭಟನೆ ನಡೆಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿವೆ.

ಜೆಡಿಎಸ್-ಎನ್‌ಡಿಎ ಮೈತ್ರಿಕೂಟ ಸೇರಿದ ನಂತರ ಇಂದು ಬಿಜೆಪಿ ಜತೆಗೂಡಿ ಆ ಪಕ್ಷದ ಶಾಸಕರು ಮತ್ತು ಮುಖಂಡರು ವಿಧಾನಸೌಧ ಮತ್ತು ವಿಕಾಸಸೌಧದ ನಡುವೆ ಇರುವ ಗಾಂಧಿ ಪ್ರತಿಮೆ ಬಳಿ ಧರಣಿ ಕುಳಿತು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿಗಳು, ಇಂಡಿಯಾ ಕೂಟಕ್ಕೆ ಡಿಎಂಕೆ ಓಲೈಸಿಕೊಳ್ಳಲು ಇಲ್ಲಿನ ಕಾಂಗ್ರೆಸ್ ಸರ್ಕಾರ ರೈತರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದೆ ಎಂದು ಟೀಕಿಸಿದರು.

ನಮಗೆ ಕುಡಿಯುವ ನೀರಿಗೆ ತೊಂದರೆ ಇರುವ ಸಂದರ್ಭದಲ್ಲಿ ರಾಜಾರೋಷವಾಗಿ ತಮಿಳುನಾಡಿಗೆ ನೀರು ಹರಿಸಿ ಮುಂದಿನ ದಿನಗಳಲ್ಲಿ ಕಾವೇರಿ ಜಲಾನಯನ ಭಾಗದ ಜನರ ಜೀವನವನ್ನು ಬೀದಿ ಪಾಲು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಕಾವೇರಿ ನೀರಿನ ವಿಷಯದಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವೈಫಲ್ಯ ಕಂಡಿದೆ. ನಮ್ಮ ಜನರಿಗೆ ದ್ರೋಹ ಬಗೆದು ತಮಿಳುನಾಡಿಗೆ ನೀರು ಹರಿಸುತ್ತಿದೆ.

ಸ್ಟಾಲಿನ್ ಓಲೈಕೆಗಾಗಿ ನ್ಯಾಯಾಲಯಗಳಲ್ಲಿ ಸಮರ್ಪಕ ಹೋರಾಟ ನಡೆಸಲು ಅಗತ್ಯ ದಾಖಲೆಗಳನ್ನು ಒದಗಿಸಲು ಸರ್ಕಾರ ವಿಫಲವಾಗಿದೆ. ಸಂಬಂಧಪಟ್ಟ ಪ್ರಾಧಿಕಾರಗಳ ಮುಂದೆ ನಮ್ಮ ಅಧಿಕಾರಿಗಳು ಖುದ್ದು ಹಾಜರಾಗದೆ, ವರ್ಚ್ಯುಯಲ್ ಮೂಲಕ ಸಭೆಗೆ ಹಾಜರಾಗುತ್ತಿರುವುದೇ ಇದಕ್ಕೆ ಸಾಕ್ಷಿ ಎಂದು ಹೇಳಿದರು.

ಇದೇ ತಮಿಳುನಾಡಿನ ಅಧಿಕಾರಿಗಳು ತಮ್ಮ ರಾಜ್ಯದ ಪರ ಯಾವ ರೀತಿ ವಕಾಲತ್ತು ವಹಿಸುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು.

ರಾಜ್ಯದ ಜನರು ಬೀದಿಗಿಳಿದು ಹೋರಾಡುತ್ತಿದ್ದು, ಬಿಜೆಪಿ - ಜೆಡಿಎಸ್ ಇದಕ್ಕೆ ಎಲ್ಲ ರೀತಿಯ ಬೆಂಬಲ ಕೊಡುತ್ತದೆ ಎಂದು ಪ್ರಕಟಿಸಿದರು. ಈಗಲಾದರೂ ಇದನ್ನು ಸರಿಪಡಿಸಿ. ಇಲ್ಲವಾದರೆ ಕಾನೂನು - ಸುವ್ಯವಸ್ಥೆ ಹದಗೆಡಲಿದೆ. ಅದಕ್ಕೆ ರಾಜ್ಯ ಸರ್ಕಾರವೇ ಹೊಣೆ ಎಂದು ಎಚ್ಚರಿಸಿದರು.

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮಾಜಿ ಡಿಸಿಎಂ ಗೋವಿಂದ ಕಾರಜೋಳ, ಮಾಜಿ ಸಚಿವರು, ಬಿಜೆಪಿಯ ಸಂಸದರು, ಬಿಜೆಪಿ - ಜೆಡಿಎಸ್ ಪಕ್ಷಗಳ ಶಾಸಕರು, ವಿಧಾನಪರಿಷತ್ ಸದಸ್ಯರು, ಎರಡೂ ಪಕ್ಷಗಳ ಪ್ರಮುಖರು ಭಾಗವಹಿಸಿದ್ದರು.

## ವಿಕಲಚೇತನ ವಿದ್ಯಾರ್ಥಿ ವೇತನಕ್ಕೆ ಅರ್ಜಿ

ದಾವಣಗೆರೆ, ಸೆ. 27 - ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2023-24ನೇ ಸಾಲಿನಲ್ಲಿ ಪ್ರೀ ಮೆಟ್ರಿಕ್ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಜಿಲ್ಲೆಯ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

URL for Fresh application: HYPERLINK ihttps://ssp.karnataka.gov.in/ssp2324/homenew.aspx%20%20%20%20%20&i https://ssp.karnataka.gov.in/ssp2324/homenew.aspx & URL for Renewal application: HYPERLINK ihttps://ssp.karnataka.gov.in/ssp2324/signin.aspxi-https://ssp.karnataka.gov.in/ssp2324/signin.aspx ವೆಬ್‌ಸೈಟ್ ನಲ್ಲಿ ನೋಂದಣಿ ಮಾಡಿಕೊಂಡು ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ವಿವಿಧೋದ್ದೇಶ ಪುನರ್ವಸತಿ ಕಾರ್ಯ ಕರ್ತರಾದ ಬಿ. ಚನ್ನಪ್ಪ 95908 29024 (ದಾವಣಗೆರೆ), ಶೈಲಜಾ ಕೆ.ಎಂ.- 98863 66809 (ಹೊನ್ನಾಳಿ) , ಸುಬ್ರಮಣ್ಯ ಕೆ 9945738141 (ಚನ್ನಗಿರಿ), ಶಿವನಗೌಡ ಎಂ.ಕೆ-99021 05734 (ಜಗಳೂರು), ಶಶಿಕಲಾ ಟಿ-99454 58058 (ಹರಿಹರ) ಇವರನ್ನು ಸಂಪರ್ಕಿಸಲು ಜಿಲ್ಲಾ ವಿಕಲಚೇತ ನರ ಹಾಗೂ ಹಿರಿಯ ನಾಗರಿಕರ ಸಬಲೀ ಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ಕೇಂದ್ರ ಸರ್ಕಾರದ 9 ವರ್ಷಗಳ ಸಾಧನೆಯ ಅನಾವರಣ, ಛಾಯಾಚಿತ್ರ ಪ್ರದರ್ಶನ



**ಹರಿಹರ**

ಹರಿಹರ,ಸೆ.27- ಕೇಂದ್ರ ಸಂವಹನ ಇಲಾಖೆ (ಶಿವಮೊಗ್ಗ) ವತಿಯಿಂದ ಹರಿಹರದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ಕೇಂದ್ರ ಸರ್ಕಾರದ ಒಂಭತ್ತು ವರ್ಷಗಳ ಸಾಧನೆಗಳ ಛಾಯಾಚಿತ್ರ ಪ್ರದರ್ಶನ ಮತ್ತು ಪೋಷಣ್ ಮಾಸಾಚರಣೆಯನ್ನು ಸಂಸದ ಜಿ.ಎಂ.ಸಿದ್ದೇಶ್ವರ ಅವರು ಮಂಗಳವಾರ ಉದ್ಘಾಟಿಸಿದರು.

ಕೃಷಿ ಸಿಂಚಾಯಿ ಯೋಜನೆ, ಸಾಯಿಲ್ ಹೆಲ್ತ್ ಕಾರ್ಡ್, ಕಿಸಾನ್ ಸಮ್ಮಾನ್, ನೀಮ್ ಕೋಟೆಡ್ ಯೂರಿಯಾ, ಮೇರಿ ಮಿಟಿ ಮೇರಾ ದೇಶ್, ಏಕ ಭಾರತ ಶ್ರೇಷ್ಠ ಭಾರತ, ಆಯುಷ್ಮಾನ್ ಭಾರತ್, ಒಂದು ರಾಷ್ಟ್ರ ಒಂದು ಮಾರುಕಟ್ಟೆ, ಒಂದು ತೆರಿಗೆ, ಕೃಷಿ ನಿರ್ವಹಣೆಯಲ್ಲಿ ಪರ್ಯಾಯ ಪೋಷಕಾಂಶ ಗಳ ಬಳಕೆಗೆ ಉತ್ತೇಜನ ನೀಡುವ ಪಿಎಂ ಪ್ರಣಾಮ್ ಯೋಜನೆಗಳು ಗಮನ ಸೆಳೆದವು.

ವಿಶೇಷವಾಗಿ ಪೋಷಣ್ ಮಾಸಾ ಚರಣೆ ಅಂಗವಾಗಿ ಪೋಷ ಕಾಂಶ ಆಹಾರ ಪದಾರ್ಥಗಳ ಪ್ರದರ್ಶನ ನಡೆಯಿತು. ಕೇಂದ್ರ ಸರ್ಕಾರದ ಮಾತೃ ವಂದನಾ ಯೋಜನೆಯಡಿ ಆರು ಸಾವಿರ ರೂ. ಸೌಲಭ್ಯ ಪಡೆದ ನೂರಕ್ಕೂ ಅಧಿಕ ತಾಯಂದಿರು ಭಾಗವಹಿಸಿದ್ದರು.

ಶಾಸಕ ಬಿ.ಪಿ.ಹರೀಶ್ ಅಧ್ಯಕ್ಷತೆ ವಹಿಸಿದ್ದರು. ನಗರಸಭೆ ಅಧ್ಯಕ್ಷರಾದ ನಿಂಬಕ್ಕ ನಿಂಗಪ್ಪ ಚಂದಾಪುರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಪೂರ್ಣಿಮಾ, ಕೇಂದ್ರ ಸಂವಹನ ಇಲಾಖೆಯ ಕ್ಷೇತ್ರ ಪ್ರಚಾರಾಧಿಕಾರಿ ಸಿ.ಹೆಚ್.ಅಕ್ಷತಾ, ಲಕ್ಷ್ಮೀಕಾಂತ್ ಉಪಸ್ಥಿತರಿದ್ದರು.

## ಕುಂಬಳೂರಿನಲ್ಲಿ ವಿಶ್ವಕರ್ಮ ಜಯಂತ್ಯುತ್ಸವ



ಮಲೇಬೆನ್ನೂರು, ಸೆ. 27- ಕುಂಬಳೂರು ಗ್ರಾಮದಲ್ಲಿ ವಿಶ್ವಕರ್ಮ ಸಮಾಜದವರು ಶ್ರೀ ವಿಶ್ವಕರ್ಮ ಜಯಂತ್ಯುತ್ಸವವನ್ನು ಆಚರಿಸಿದರು.

ಶ್ರೀ ವಿಶ್ವಕರ್ಮರ ಭಾವಚಿತ್ರವನ್ನು ಗ್ರಾಮದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಮಾಡಿದ ವಿಶ್ವಕರ್ಮ ಸಮಾಜದವರು ನಂತರ ಗ್ರಾಮಸ್ಥರಿಗೆ ಅನ್ನಸಂತರ್ಪಣೆ ಏರ್ಪಡಿಸಿದ್ದರು. ಪೂರ್ಣಕುಂಭ ಹೊತ್ತ ಮಹಿಳೆಯರು ಮತ್ತು ವೀರಗಾಸೆ ಮೆರವಣಿಗೆಗೆ ಮೆರೆಗರು ತಂದರು. ವಿಶ್ವಕರ್ಮ ಸಮಾಜದ ಕುಬೇರಾಚಾರ್, ಮೌನೇಶ್ವರಚಾರ್, ಮಂಜುನಾಥಚಾರ್, ಕಲ್ಯಾಣಕುಮಾರ್, ಕೇಶವಚಾರ್, ಪ್ರಕಾಶಚಾರ್, ಮುದುಕಾಚಾರ್, ಕಿರಣ್‌ಕುಮಾರ್, ಪಂಚಾಚಾರ್, ರಾಮಚಂದ್ರಚಾರ್, ಶಿಲ್ಪಾ, ಅನಿತಾ, ಪುಷ್ಪಾ, ಕಾವೇರಿ, ಸರೋಜ, ಸುಜಾತ, ಗೌರಮ್ಮ, ಜ್ಯೋತಿ, ಮೀನಾಕ್ಷಿ, ಜಯಮ್ಮ, ಮೇಘ, ಮಂಜಮ್ಮ, ಶೋಭಾ, ಶಂಕ್ರಮ್ಮ, ರತ್ನಮ್ಮ, ದಾಕ್ಷಾಯಿಣಮ್ಮ, ಗಂಗಮ್ಮ, ಶಕುಂತಲಮ್ಮ ಮತ್ತು ಯುವ ಮುಖಂಡ ಎಂ. ವಾಸುದೇವಮೂರ್ತಿ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

## ಕರಾಟೆ : ವಿದ್ಯಾರ್ಥಿಗಳಿಗೆ ಬಹುಮಾನ



ದಾವಣಗೆರೆ, ಸೆ.27- ಚಿತ್ರದುರ್ಗದ ಚೈತನ್ಯ ಪಿ.ಯು. ಕಾಲೇಜು ಹಾಗೂ ನಿಹಾನ್ ಶೋಟೋಕಾನ್ ಕರಾಟೆ ಸಂಸ್ಥೆಯ ಸಹಯೋಗದಲ್ಲಿ ಈಚೆಗೆ ನಡೆದ ರಾಜ್ಯಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಜಿಲ್ಲೆಯ ನಿಹಾನ್ ಶೋಟೋಕಾನ್ ಕರಾಟೆ ಅಸೋಷಿಯೇಷನ್‌ನ ವಿದ್ಯಾರ್ಥಿಗಳಿಗೆ ಬಹುಮಾನ ಲಭಿಸಿದೆ.

ಎಂ. ವರ್ಷ ಕುಯಿಟಿ ವಿಭಾಗದಲ್ಲಿ ಪ್ರಥಮ, ಕಟಾ ವಿಭಾಗದಲ್ಲಿ ದ್ವಿತೀಯ, ಆರ್. ಆದಿತ್ಯ ಕಟಾ ವಿಭಾಗದಲ್ಲಿ ಪ್ರಥಮ, ಕುಯಿಟಿ ದ್ವಿತೀಯ, ಆರಾಧ್ಯ ಕುಯಿಟಿ ವಿಭಾಗದಲ್ಲಿ ದ್ವಿತೀಯ, ಕಟಾ ವಿಭಾಗದಲ್ಲಿ ತೃತೀಯ ಹಾಗೂ ಗಣೇಶ ಬಿ. ಬನಕಂಡಿ ಕುಯಿಟಿ ವಿಭಾಗದಲ್ಲಿ ಪ್ರಥಮ ಬಹುಮಾನ ಗಳಿಸಿ, ರಾಜ್ಯಕ್ಕೆ ಮತ್ತು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

## ಈದ್ ಮಿಲಾದ್ ಶುಭ ಹಾರೈಸಿದ ಎಸ್ಸೆಸ್



ದಾವಣಗೆರೆ,ಸೆ.27- ಮುಸ್ಲಿಂ ಬಾಂಧವರು ಆಚರಿಸುತ್ತಿರುವ ಈದ್ ಮಿಲಾದ್ ಹಬ್ಬವು ಸಮಸ್ತ ಬಾಂಧವರಿಗೆ ಸುಖ, ಶಾಂತಿ, ಸಮೃದ್ಧಿ, ಸಹಬಾಳ್ವೆಗೆ ನಾಂದಿಯಾಗಲಿ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಅವರು ಶುಭ ಹಾರೈಸಿದರು.

ಸ್ಥಳೀಯ ಆಜಾದ್ ನಗರದಲ್ಲಿರುವ ಮದೀ ನಾ ಅರಬ್ಬಿ ಮದರಸಾದಲ್ಲಿ ಈದ್ ಮಿಲಾದ್ ನೂತನ ಸಮಿತಿ ಪದಾಧಿಕಾರಿಗಳಿಗೆ ಸನ್ಮಾನಿಸಿ, ಅವರು ಶುಭ ಕೋರಿದರು. ಅಧ್ಯಕ್ಷ ಅಲ್ಹಾಜ್ ಎ. ಬಿ. ಹಬೀಬ್ ಸಾಬ್, ಉಪಾಧ್ಯಕ್ಷರಾದ ಯಾಸಿನ್ ಪೀರ್ ರಜವಿ, ಪಿ. ಖಾಸಿಂ ಸಾಬ್, ಮಹಮ್ಮದ್ ಅಕ್ಬರ್ ಅಲಿ, ಕೆ. ಸಿ. ಮಹಮ್ಮದ್ ಹನೀಫ್ ಸಾಬ್, ಕಾರ್ಯದರ್ಶಿ ನಜೀರ್ ಅಹಮದ್, ಸಹ ಕಾರ್ಯದರ್ಶಿ ವಿ. ಪಿ. ಶಫಿ ಸಾಬ್, ಡಿ. ರಿಯಾಜ್, ಕಲೀಮ್ ಖಾನ್ ಹಾಶಮಿ, ವಾಜೀದ್, ಖಜಾಂಚಿ ಸ್ಯೆಯದ್ ಜಬೀಉಲ್ಲ ರಜ್ವಿ, ಎಂ.ಆರ್. ಸಿದ್ದಿಕ್ ಉಪಸ್ಥಿತರಿದ್ದರು.

## ರಾಜೇಶ್ವರಿ ಬಡಾವಣೆಯಲ್ಲಿ ರಂಗೋಲಿ ಸ್ಪರ್ಧೆ ಕಾರ್ಯಕ್ರಮ



ದಾವಣಗೆರೆ, ಸೆ.27- ನಿಟುವಳ್ಳಿ ಶ್ರೀ ರಾಜೇಶ್ವರಿ ಬಡಾವಣೆ ಗೌರಿಸುತ ಫ್ರೆಂಡ್ಸ್ ಗ್ರೂಪ್, ಸುವರ್ಣ ಕರ್ನಾಟಕ ವೇದಿಕೆ ವತಿಯಿಂದ 13ನೇ ವರ್ಷದ ಗಣೇಶೋತ್ಸವದ ಪ್ರಯುಕ್ತ ರಂಗೋಲಿ ಸ್ಪರ್ಧೆ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಯಿತು.

ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್, ಮಾತೃದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿಟೆಬಲ್ ಟ್ರ ಸ್ಟ್‌ನ ಅಧ್ಯಕ್ಷ ಪೋತಗಲ್ ಶ್ರೀನಿವಾಸ, ಕಾರ್ಯದರ್ಶಿ ನವೀನ್ ಗುಬ್ಬಿ, ಗೌರಿಸುತ ಫ್ರೆಂಡ್ಸ್ ಗ್ರೂಪ್ ಅಧ್ಯಕ್ಷ ಪರಮೇಶ್, ಕಾರ್ಯದರ್ಶಿ ವಿನೋದ್ ಕುಮಾರ್, ಜನಪದ ಕಲಾವಿದ ಉಮೇಶ್ ನಾಯ್ಕ್, ಚಿನ್ನಸಮುದ್ರ, ಶ್ರೀಮತಿ ರುಕ್ಮಾಬಾಯಿ, ಶಾಂತಕುಮಾರ ದೊಡ್ಮನಿ ಮತ್ತಿತರರು ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 45x48.5 South, ಡಾಲರ್ಸ್ ಕಾಲೋನಿಯಲ್ಲಿ 40x40 South, 30x43 North, ಅಥಣಿ ಕಾಲೇಜ್ ಹತ್ತಿರ, ಕಮರ್ಷಿಯಲ್
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕೆ (KHB)**
(for immediately register only)
ಕರ್ನಾಟಕ ಹೌಸಿಂಗ್ ಬೋರ್ಡ್ ತುಂಗಭದ್ರಾ ಬಡಾವಣೆಯಲ್ಲಿ 20x30 ಉತ್ತರ (13 ಲಕ್ಷ) 30x40 ದಕ್ಷಿಣ (29 ಲಕ್ಷ) 40x60 ದಕ್ಷಿಣ (64 ಲಕ್ಷ)
ಕಿರಣ್ ಭೂಸನೂರ್ (ಏಜೆಂಟ್)
98440-63409
(ಲೊಕೇಶನ್ ತುಂಬಾ ಚನ್ನಾಗಿ ಇದೆ)

**ಕಾರ್ ಡ್ರೈವರ್ ಬೇಕಾಗಿದ್ದಾರೆ**
KPTCL ಕಛೇರಿಗೆ ಹೊಸ ಸ್ವಿಫ್ಟ್ ಕಾರ್ ಓಡಿಸಲು ಡ್ರೈವರ್ ಬೇಕಾಗಿದ್ದಾರೆ, ದಾವಣಗೆರೆ.
ಸಂಪರ್ಕಿಸಿ : 89700 30741
(ಸಂಬಳ 10000 ರೂ. ತಿಂಗಳಿಗೆ)

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ದಾವಣಗೆರೆ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರಕ್ಕೆ ರಾತ್ರಿ ಪಾಳೆಯಕ್ಕೆ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಆಧಾರ್ ಕಾರ್ಡ್ ಸಮೇತ ಸಂಪರ್ಕಿಸುವ ದಿನಾಂಕ ಮತ್ತು ಸಮಯ : 30.09.2023ರ ಶನಿವಾರ ಬೆಳಿಗ್ಗೆ 11ರ ತನಕ.
ಎಂ. ಶಿವಪ್ಪ, ಕಾರ್ಯದರ್ಶಿ, ಶ್ರೀ ಸಾಯಿ ಟ್ರಸ್ಟ್
99021 22502, 70192 04202

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಲೀಸ್‌ಗೆ ಮನೆ ಬೇಕಾಗಿದೆ**
ಸಿದ್ದವೀರಪ್ಪ ಬಡಾವಣೆ, ವಿದ್ಯಾನಗರ, ವಿನಾಯಕ ಬಡಾವಣೆ, ಆಂಜನೇಯ ಬಡಾವಣೆ, ವಿವೇಕಾನಂದ ಬಡಾವಣೆ, ಸಂಪರ್ಕಿಸಿ :
97421 66799

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮನೆ ಮಾರಾಟಕ್ಕಿವೆ**
50x80 North, 40x60 North, 120 ಅಡಿ ರೋಡಿಗಿದೆ, 40x60, 40x60 South ಅಕ್ಕ-ಪಕ್ಕ 30x50 ಕಾರ್ನರ್
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕೆ**
ಸರ್ಕಾರಿ ನೌಕರರ ಬಡಾವಣೆ, ಎರಡನೇ ಹಂತ, ಬಾತಿಕೆರೆ ಹತ್ತಿರ 30x40, 30x47 (ಅಂದಾಜು) ಟೋಟಲ್ 2620 ಅಡಿ ಉತ್ತರ-ಪೂರ್ವ ಕಾರ್ನರ್.
ಕಿರಣ್ ಭೂಸನೂರ್
98440-63409
(ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ)

**ಮಲೇಬೆನ್ನೂರಿನಲ್ಲಿ ಜಮೀನು ಮಾರಾಟಕ್ಕಿದೆ**
ಮಲೇಬೆನ್ನೂರಿನಿಂದ ವಡೆಯರ ಬಸಾಪುರ ಹೋಗುವ ರಸ್ತೆ ಬಲ ಭಾಗದಲ್ಲಿ 1 ಎಕರೆ 28 ಗುಂಟೆ ನೀರಾವರಿ ಜಮೀನು ಮಾರಾಟಕ್ಕಿದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) ಆಸಕ್ತರು ಸಂಪರ್ಕಿಸಿ :
99866 94920, 70907 43891

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
91108 98377

**ಹೋಂ ನರ್ಸಿಂಗ್ ಸರ್ವೀಸ್**
ಹೆಲ್ತ್‌ಕೇರ್ ಮಹಿಳೆಯರು & ಪುರುಷರಿಗೆ
ಸ್ನಾನ, ಡೈಪರ್ ಚೇಂಜ್, ವಾಕ್ 1/2 ಗಂಟೆ 1,2 ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಕೆಲಸಕ್ಕೆ ಸಿಗುತ್ತಾರೆ. ಬೇಕಾದವರು ಕರೆ ಮಾಡಿ, ವಯಸ್ಸಾದ ಜೆಂಟ್ಸ್, ಲೇಡಿಸ್ ಇವರಿಗೆ ಬೇಕಾದರೆ ಕರೆ ಮಾಡಿ. ಕೆಲಸಕ್ಕೆ ಬೇಕಾದರೆ ಈ ನಂಬರಿಗೆ ಕರೆ ಮಾಡಿ. ಶಿಲ್ಪಾ :
91644 93271

**ತಕ್ಷಣ ಬೇಕಾಗಿದ್ದಾರೆ**
ಅನುಭವವುಳ್ಳ ಬೆಣ್ಣೆ ದೋಸೆ ಭಟ್ಟರು ಬೆಂಗಳೂರಿನಲ್ಲಿ ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ. ಅನುಭವಕ್ಕೆ ತಕ್ಕ ವೇತನ ಹಾಗೂ ಉಚಿತ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ :
86609 35720

**ಉಷಾ ಟ್ರೇಡಿಂಗ್ ಕಂಪನಿ**
ಮಂಡಿಪೇಟೆ, ಗೂಡ್ ಶೆಡ್ ರಸ್ತೆ, ದಾವಣಗೆರೆ, ಅಧಿಕೃತ ಮಾರಾಟಗಾರರು : ಡರ್ಬಿ ಹೊಲಿಗೆ ಯಂತ್ರಗಳು ಮತ್ತು ಬಿಡಿ ಭಾಗಗಳು ಹೊಲಿಗೆ ಯಂತ್ರಗಳ ರಿಪೇರಿ ಸೌಲಭ್ಯ ಇದೆ. ಸಂಪರ್ಕಿಸಿ :
9448449617, 9480500808

**TUTION**
IGCSE, ICSE, CBSE and State Board from Class 1 to 12, MCC `A' Block
98444 92888

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದವಾಡ ಸೈ. ನಂ. 44 (30x50) ಪಶ್ಚಿಮ, ನೈಋತ್ಯ ಮೂಲೆ
3) ಕುಂದವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಮನೆ ಬಾಡಿಗೆಗೆ ಇದೆ**
# 2287, 8ನೇ ಮೇನ್, ಎಂಸಿಸಿ ಎ ಬ್ಲಾಕ್, ಸಾಯಿಬಾಬಾ ಗುಡಿ ಹತ್ತಿರ, ವಿಶಾಲವಾಗಿರುವ ಎರಡು ಬೆಡ್ ರೂಂ ಮನೆ ಬಾಡಿಗೆಗೆ ಇದೆ.
98868 50964

**ತಕ್ಷಣ ಸಂಪರ್ಕಿಸಿ**
ಮಹಿಳೆ, ಪುರುಷ ನುರಿತ ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್ ಬೇಕಾಗಿದ್ದಾರೆ. ಸಂಪರ್ಕಿಸಿ :
ESI & PF ಮತ್ತು ಊಟ, ವಸತಿ ಸೌಲಭ್ಯವಿದೆ.
88844 99983

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**LOAN And INSURANCE**
ಹೋಮ್‌ಲೋನ್ ಬ್ಯುಸಿನೆಸ್ ಲೋನ್, ಸ್ಯಾಲರಿ ಲೋನ್ ಮತ್ತು ಎಲ್ಲಾ ತರಹದ ವಾಹನಗಳ ಇನ್ಸೂರೆನ್ಸ್‌ಗಾಗಿ ಸಂಪರ್ಕಿಸಿ.
ಮೊ : 74061 01333

**ಆಫೀಸ್ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
SHAH OPTICALS
4th Main, Opp Drishti Eye Hospital, P.J. Extension, Davangere.
93536 89957

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಪಾರ್ಟ್‌ಟೈಂ ಹಾಗೂ ಫುಲ್ ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಹಾಗೂ ದಾವಣಗೆರೆಯಲ್ಲಿ ವಾಸವಿರುವವರಿಗೆ ಆದ್ಯತೆ
ವೆಂಕಟೇಶ್ವರ ಫಾರ್ಮಾಸ್ಯೂಟಿಕಲ್ಸ್
2ನೇ ಮೇನ್, ಕೆಟಿಜೆ ನಗರ, ದಾವಣಗೆರೆ-2.
86607 75329

**ಬೇಕಾಗಿದ್ದಾರೆ**
ಡಿಟಿಪಿ ಆಪರೇಟರ್ ಮತ್ತು ಜೆರಾಕ್ಸ್ ಮಾಡಲು ಯುವಕ-ಯುವತಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ : ಶ್ರೀ ವೆಂಕಟೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ.
ಹೊಸ ಕೋರ್ಟ್ ಎದುರು, ದಾವಣಗೆರೆ.
81475 59927

**ಕೆಲಸಕ್ಕೆ ಬೇಕಾಗಿದ್ದಾರೆ**
ಹೌಸ್ ಕೀಪಿಂಗ್ (ಸ್ವಚ್ಛತಾ) ಕೆಲಸಕ್ಕೆ ಬೇಕಾಗಿದ್ದಾರೆ.
96634 32551


**WANTED FEMALE RECEPTIONIST**
Age : 20 to 27years,Quli : PUC/Any degree
Kannada, English, Hindi
12k to 15k Per Month
HAIRPOINT UNISEX SALON
MCC B block, near water tank park, Davangere
97386 64400, 91483 19342

**ಬೇಕಾಗಿದ್ದಾರೆ**
ಬ್ಯಾಂಕಿಂಗ್ ಸೆಕ್ಟರ್ ಅಲ್ಲಿ ಕೆಲಸ ಮಾಡಲು ಟೆಲಿ ಕಾಲರ್ಸ್ ಬೇಕಾಗಿದ್ದಾರೆ. ಉತ್ತಮ ವೇತನ ಮತ್ತು ಇನ್‌ಸೆಂಟಿವ್ಸ್ ಕೊಡಲಾಗುತ್ತದೆ.
90366 36102

**ಜಮೀನು ಮಾರಾಟಕ್ಕಿದೆ**
ಶಾಮನೂರಿನಿಂದ ಮಲೇಬೆನ್ನೂರಿಗೆ ಹೋಗುವ ರಸ್ತೆಯಲ್ಲಿ ಬೂದಿಹಾಳ್ ಹತ್ತಿರ, 3 ಎಕರೆ 23 ಗುಂಟೆ ಬೋರ್‌ವೆಲ್ ಇರುವ ನೀರಾವರಿ ಜಮೀನು ಮಾರಾಟಕ್ಕಿದೆ.
99454 61501
76196 37007

**ಗ್ಯಾಸ್‌ಗೀಸರ್ ರಿಪೇರಿ**
ಎಲ್ಲಾ ಕಂಪನಿಯ ಗ್ಯಾಸ್ ಗೀಸರ್ ಮತ್ತು ಗ್ಯಾಸ್ ಸ್ಟವ್‌ಗಳನ್ನು ನಿಮ್ಮ ಮನೆಗೇ ಬಂದು ರಿಪೇರಿ ಮಾಡಿಕೊಡುತ್ತೇವೆ. ಹಳೆಯ ಗ್ಯಾಸ್, ಗ್ಯಾಸ್ ಗೀಸರ್ ಮತ್ತು ಗ್ಯಾಸ್ ಸ್ಟವ್‌ಗಳನ್ನು ಖರೀದಿಸುತ್ತೇವೆ.
ರತ್ನ ಮಾರ್ಕೆಟಿಂಗ್
99019 40727

**ನೇತ್ರ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**SALES EXECUTIVES WANTED**
Male / Female
Experience in Sales Field.
Good Communication Skill
Attractive Salary
Kabbur Furnitures
Beside Sultan Diamonds & Gold Showroom
P.B Road, Davanagere.
8951916300

**ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ**
ಸಮಯ - 9.00 AM to 8.00 PM.
ಭಾನುವಾರ ಹಾಫ್ ಡೇ ಕಡ್ಡಾಯ.
ಫೋನ್ - 9448154682.

**ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ**
ಎಲ್ಲಾ ರೀತಿಯ ದೈಹಿಕ ರೋಗಗಳು, ಮಾನಸಿಕ ಕಾಯಿಲೆಗಳು ಮತ್ತು ವ್ಯಾಪಾರ, ವ್ಯವಹಾರ, ವೈವಾಹಿಕ, ಶತ್ರುಬಾಧೆ, ಮನೆಯಲ್ಲಿ ಕಿರಿಕಿರಿ ಈ ಎಲ್ಲಾ ಸಮಸ್ಯೆಗಳಿಗೆ ರಾಮ ಬಾಣ.
80733 42011

**ಮನೆ ಲೀಸ್‌ಗಿದೆ**
ದಾವಣಗೆರೆ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್, ಪೂಜಾ ಇಂಟರ್ ನ್ಯಾಷನಲ್ ಹಿಂಭಾಗ, 15x40 ಅಡಿ ಅಳತೆಯ ನೆಲಮಹಡಿ ಸುಸಜ್ಜಿತ ಮನೆ ಲೀಸ್ ಗಿದೆ. ಸಂಪರ್ಕಿಸಿ.
84312 34539, 99723 42941

**WANTED**
Receptionist (Female)
Contact between 11 Am to 4-30 PM.
Personal Training Studio
'Sree Sadha', # 2659, MCC 'B' Block, Dental College Road, Davangere - 577 004.
M : 8073887635

**ಕೆಲಸಕ್ಕೆ ಬೇಕಾಗಿದ್ದಾರೆ**
ಸಂಕೇಶ್ವರ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಯಲ್ ಏರಿಯಾ ದಾವಣಗೆರೆ. ಮಾರ್ಕೆಟಿಂಗ್ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದ್ದಾರೆ. ಫ್ಯಾಕ್ಟರಿ ಕೆಲಸಕ್ಕೆ ಬೇಕಾಗಿದ್ದಾರೆ.
99018 69371, 94829 91495

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆಯ ಪಿ. ಬಿ. ರಸ್ತೆಯಲ್ಲಿರುವ ಜೈನ್ ಟೆಂಪಲ್ ಹಿಂಭಾಗದಲ್ಲಿ ಪಿಬಿ ರಸ್ತೆ ಹಾಗೂ NH-4 ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಲಾಗುತ್ತಿರುವ ನಿವೇಶನಗಳನ್ನು ಸುಲಭ 3 ಕಂತುಗಳಲ್ಲಿ prebooking ಮಾಡಿಕೊಳ್ಳಲಾಗುತ್ತಿದೆ. ಆಸಕ್ತರು ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.
90192 33241, 90198 88512
70196 18397

**FOR RENT**
A semi-furnished 2 BHK home with 1800 sq.ft. of space on the Ground Floor.
Note : No brokers please.
Address: 2670/42, 3rd Main, S.S. Layout B Block, Davangere - 577004
Contact : 93411 03332

**ಜಮೀನು ಮಾರಾಟಕ್ಕೆ ಇವೆ**
ಅಡಿಕೆ ತೋಟ 11 1/2 ಎಕರೆ ಕುಕ್ಕುವಾಡ ಹತ್ತಿರ, ಲೋಕಿಕೆರೆ ಹತ್ತಿರ 3 ಎಕರೆ, ಅಡಿಕೆ ತೋಟ ಇದೆ, ಮಲ್ಲಶೆಟ್ಟಿ ಹಳ್ಳಿ ಹತ್ತಿರ 2 ಎಕರೆ ಇದೆ.
ಏಜೆಂಟರು S ಯಲ್ಲೋಜಿರಾವ್
97418 11694

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಲೀಸ್‌ಗೆ ಇದೆ**
24ನೇ ವಾರ್ಡ್‌ನ #337/101, ರಲ್ಲಿ 2BHK ಮನೆ ಲೀಸ್‌ಗೆ ಇದೆ.
ಗಣೇಶ ಲೇಔಟ್, ದಾವಣಗೆರೆ.
98800 56262

**ಸೈಟು ಮಾರಾಟಕ್ಕಿದೆ**
(KHB) ಕರ್ನಾಟಕ ಗೃಹ ಮಂಡಳಿ 40ಅಡಿ ರಸ್ತೆಗೆ ಬರುವಂತಹ 40x60 ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕಿದೆ.
87622 85869
76763 81314

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಶಿಕ್ಷಕ ವೃತ್ತಿ ಎಲ್ಲಾ ವೃತ್ತಿಗಳ ತಾಯಿ : ಪರಶುರಾಮನಗೌಡ



ದಾವಣಗೆರೆ, ಸೆ.27- ಶಿಕ್ಷಣದಲ್ಲಿ ಕಲಿಯಬೇಕೆಂಬ ಒತ್ತಾಸೆ ಇರಬೇಕು, ಶಿಕ್ಷಕ ವೃತ್ತಿಯನ್ನು ಬೇರೆ ಯಾವ ವೃತ್ತಿಗೂ ಹೋಲಿಕೆ ಮಾಡಲು ಸಾಧ್ಯವಿಲ್ಲ. ಎಲ್ಲಾ ವೃತ್ತಿಗಳ ತಾಯಿ ಶಿಕ್ಷಕ ವೃತ್ತಿಯಾಗಿದೆ ಎಂದು ನೂತನ ವಿದ್ಯಾಸಂಸ್ಥೆಯ ಅಧ್ಯಕ್ಷ ಪರಶುರಾಮನಗೌಡ ಹೇಳಿದರು.

ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆಯ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಮಗೆ ಸಾಧನೆ ಮಾಡಬೇಕೆಂಬ ಗುರಿ ಇರಬೇಕು. ವಿದ್ಯಾರ್ಥಿಗಳು ತಮ್ಮ ಹೃದಯದಲ್ಲಿ ಶಿಕ್ಷಕರನ್ನು ಆರಾಧಿಸುವಂತಹ ಶಿಕ್ಷಕರು ನೀವಾಗಬೇಕು ಎಂದು ಪ್ರಶಿಕ್ಷಣಾರ್ಥಿಗಳಿಗೆ ತಿಳಿಸಿದರು.

ಸರ್ಕಾರಿ ಮಾಜಿ ಪುರಸಭೆ ಪಿ.ಯು. ಕಾಲೇಜು (ಪ್ರೌಢಶಾಲಾ ವಿಭಾಗ)ದ ಉಪ ಪ್ರಾಚಾರ್ಯ ಆರ್.ನಾಗರಾಜ್ ಮಾತನಾಡಿ, ಶಿಕ್ಷಣವು ನಮ್ಮ ಜೀವನವನ್ನು ಪರಿವರ್ತಿಸುತ್ತದೆ. ಬಿ.ಎಡ್, ಎಂದರೆ ಗೌರವಾನ್ವಿತ ಪದವಿ. ಕರ್ತವ್ಯದಲ್ಲಿ ಶ್ರದ್ಧೆ ಇದ್ದರೆ ಒಳ್ಳೆಯ ಸ್ಥಾನ ದೊರಕುವುದು. ಸಮಯ ಪ್ರಶ್ನೆ ಎಲ್ಲಾ ಶಿಕ್ಷಕರಲ್ಲಿ ಇರಬೇಕು. ಇಡೀ ಸಮಾಜ ಶಿಕ್ಷಕರ ಮೇಲೆ ಅವಲಂಬಿತವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಚಿಕ್ಕನಹಳ್ಳಿ ದೊಡ್ಡಪ್ಪ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಕೆ.ಶಿವಮೂರ್ತಿ ಮಾತನಾಡಿ, ಶಿಕ್ಷಣ ನಿಂತ ನೀರಲ್ಲ, ಹರಿಯುತ್ತಿರುವ ನೀರು. ಇಂದಿನ ಶಿಕ್ಷಣವು ತುಂಬಾ ಸುಲಭವಾಗಿ ದೊರೆಯುತ್ತಿದೆ. ವಿದ್ಯಾರ್ಥಿಗಳಿಗೆ ಚಿಂತನೆಗೆ ಒಳಪಡಿಸುವಂತಹ ಶಿಕ್ಷಕರಾಗಿರಬೇಕು, ಶಿಕ್ಷಕರಿಗೆ ಶ್ರದ್ಧೆ, ಶಿಸ್ತು, ಸಮಯ ಪಾಲನೆ ಮಾಡುವುದರಿಂದ ಉತ್ತಮ ಶಿಕ್ಷಕರಾಗಲು ಸಾಧ್ಯ ಎಂದರು.

ನೂತನ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಕೆ.ಎಸ್. ದಿವಾಕರ ನಾಯ್ಕ ಮಾತನಾಡಿ, ಶಿಕ್ಷಕರು ತಮ್ಮ ಕರ್ತವ್ಯದ ಮೌಲ್ಯಮಾಪನ ಮಾಡಿಕೊಳ್ಳಬೇಕು. ಶಿಕ್ಷಕರು ನೈತಿಕ ಮೌಲ್ಯಗಳನ್ನು ಹಾಗೂ ಆದರ್ಶ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹಿತ ನುಡಿಗಳನ್ನಾಡಿದರು.

ಪ್ರಶಿಕ್ಷಣಾರ್ಥಿ ಕು. ಎಸ್.ಸಿ. ಕಾವ್ಯ ಹಾಗೂ ಕು. ಎಂ.ಎಂ. ರಕ್ಷಿತಾ ಪ್ರಾರ್ಥಿಸಿದರು. ಕು. ಕೆ. ಎಸ್.ನಯನ ಅತಿಥಿಗಳನ್ನು ಸ್ವಾಗತಿಸಿದರು. ಕು. ಹೆಚ್.ಎಸ್.ಸುಷ್ಮಾ ಹಾಗೂ ಶ್ರೀಮತಿ ಹೆಚ್. ರೂಪಾ ಅತಿಥಿಗಳ ಪರಿಚಯ ಮಾಡಿದರರು. ಕು. ಡಿ.ಪಿ. ಕೃತಿ ಶಿಕ್ಷಕರ ದಿನಾಚರಣೆ ಕುರಿತು ಭಾಷಣ ಮಾಡಿದರು. ಕು. ಎಂ.ರಂಜಿತಾ ವಂದಿಸಿದರು. ಕು. ಆರ್.ವಿ. ಅಮೃತ ಕಾರ್ಯಕ್ರಮ ನಿರೂಪಿಸಿದರು.

# ಬಾಹ್ಯಾಕಾಶ ವಲಯದಲ್ಲಿ ವೈಫಲ್ಯಗಳು ಸಹಜ

## ವೈಫಲ್ಯಕ್ಕಾಗಿ ವ್ಯಕ್ತಿಗಳನ್ನು ಇಸ್ರೋ ಎಂದೂ ದಂಡಿಸುವುದಿಲ್ಲ : ಸೋಮನಾಥ್

ನವದೆಹಲಿ, ಸೆ. 27 – ಬಾಹ್ಯಾಕಾಶ ವಲಯದಲ್ಲಿ ವೈಫಲ್ಯಗಳು ಎದುರಾಗುವುದು ಸಹಜ. ಆದರೆ, ಈ ರೀತಿಯ ವೈಫಲ್ಯಗಳು ಎದುರಾದಾಗ ಇಸ್ರೋ ಯಾವುದೇ ವ್ಯಕ್ತಿಯನ್ನು ದಂಡಿಸುವುದಿಲ್ಲ. ಇದರಿಂದಾಗಿ ವಿಜ್ಞಾನಿಗಳು ಹೊಸ ಮಾರ್ಗಗಳನ್ನು ಅನ್ವೇಷಿಸಲು ಹಿಂಜರಿಯುವುದಿಲ್ಲ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

ಎ.ಐ.ಎಂ.ಎ. ಸಂಸ್ಥೆಯ 50ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಸೋಮನಾಥ್, ನಾನೂ ಸಹ ಹಲವು ವೈಫಲ್ಯಗಳನ್ನು ಎದರಿಸಿದ್ದೇನೆ. ಇದಕ್ಕಾಗಿ ನನ್ನ ಹಿರಿಯರು ಎಂದೂ ಟೀಕಿಸಿರಲಿಲ್ಲ ಎಂದಿದ್ದಾರೆ.

ಯಾವುದೇ ನಿರ್ಧಾರವನ್ನು ಒಬ್ಬನೇ ವ್ಯಕ್ತಿ ತೆಗೆದುಕೊಂಡಿರುವುದಿಲ್ಲ. ಹೀಗಾಗಿ ವೈಫಲ್ಯಕ್ಕಾಗಿ ಒಬ್ಬ ವ್ಯಕ್ತಿಯ ಮೇಲೆ ದಂಡ ವಿಧಿಸದಂತೆ ಎಚ್ಚರಿಕೆ ವಹಿಸುತ್ತೇವೆ. ಎಲ್ಲಾ ನಿರ್ಧಾರಗಳನ್ನು ಸಾಮೂಹಿಕ ಬುದ್ಧಿವಂತಿಕೆಯ ಆಧಾರದ ಮೇಲೆಯೇ ತೆಗೆದುಕೊಳ್ಳುತ್ತೇವೆ ಎಂದವರು ಹೇಳಿದ್ದಾರೆ.

ಬಾಹ್ಯಾಕಾಶ ವಲಯಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಒಬ್ಬನೇ ಅರ್ಥ ಮಾಡಿಕೊಳ್ಳಲು ಸಾಧ್ಯವಾಗದು. ಹೀಗಾಗಿ ಪ್ರತಿಯೊಂದು ಮುನ್ನಡೆಯೂ ಸಾಮೂಹಿಕ ನಿರ್ಧಾರದಿಂದಲೇ ಬರುತ್ತದೆ ಎಂದವರು ವಿವರಿಸಿದ್ದಾರೆ.

ಸಾಮೂಹಿಕ ನಿರ್ಧಾರ ತೆಗೆದುಕೊಂಡಾಗ ವೈಫಲ್ಯದ ಹೊಣೆಯನ್ನೂ ಸಮೂಹವೇ ಹೊರಬೇಕಾಗುತ್ತದೆ. ಇದಕ್ಕಾಗಿ ವ್ಯಕ್ತಿಯೊಬ್ಬರನ್ನು ದೂರಲಾಗದು ಎಂದವರು ತಿಳಿಸಿದ್ದಾರೆ.

ಹೀಗಾಗಿ ಇಸ್ರೋದಲ್ಲಿ ಹೊಸ ಮಾರ್ಗ ಹಿಡಿಯಲು ಜನರು ಧೈರ್ಯ ತೋರುತ್ತಾರೆ. ಇಲ್ಲವಾದರೆ ಯಾರೂ ಅಪಾಯ ಎದುರಿಸಲು ಇಷ್ಟಪಡುವುದಿಲ್ಲ ಎಂದು ಸೋಮನಾಥ್ ತಿಳಿಸಿದ್ದಾರೆ.

ಬಾಹ್ಯಾಕಾಶ ವಲಯದಲ್ಲಿ ವೈಫಲ್ಯಗಳು ಎದುರಾಗುವುದು ಸಹಜ. ಈ ವೈಫಲ್ಯಕ್ಕೆ ಕಾರಣವೇನು ಎಂಬುದನ್ನು ಗುರುತಿಸಿ, ಅವುಗಳನ್ನು ಸರಿಪಡಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ಇಸ್ರೋ ಅಧ್ಯಕ್ಷ ತಿಳಿಸಿದ್ದಾರೆ.

ಸಾಮಾನ್ಯ ಹಿನ್ನೆಲೆಯಿಂದ ಬಂದವರ ಜೀವನದಲ್ಲಿ ಪ್ರಗತಿಯ ಬದ್ಧತೆ ಹೆಚ್ಚಾಗಿರುತ್ತದೆ. ಮೂರನೇ ಹಂತದ ನಗರಗಳಿಂದ ಬಂದವರಿಗೆ ಜವಾಬ್ದಾರಿ ನೀಡಿದಾಗ ಬೆಳವಣಿಗೆಯ ಪ್ರಮಾಣ ಹೆಚ್ಚಾಗಿರುತ್ತದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಜನತೆಗೆ ಹೋಲಿಸಿದರೆ, ಗ್ರಾಮೀಣ ಭಾಗದ ಜನರಲ್ಲಿ ಕೆಲಸದ ಕಡೆ ಗಮನ ಕೇಂದ್ರೀಕರಿಸುವ ಗುಣ ಹೆಚ್ಚಾಗಿರುತ್ತದೆ. ಇದು ನಾನು ಇಸ್ರೋದಲ್ಲಿ ಕಲಿತ ದೊಡ್ಡ ಪಾಠ ಎಂದು ಸೋಮನಾಥ್ ತಿಳಿಸಿದ್ದಾರೆ.



ದಾವಣಗೆರೆ ನಗರದ ತೊಗಟವೀರ ಸಮುದಾಯ ಭವನದಲ್ಲಿ ಹಿಂದೂ ಯುವ ಶಕ್ತಿ ಸಂಘಟನೆ ವತಿಯಿಂದ ಆಚರಿಸಲಾಗುತ್ತಿರುವ ಗಣೇಶೋತ್ಸವದ ಅಂಗವಾಗಿ ಬುಧವಾರ ಗಣಹೋಮ ನಡೆಸಲಾಯಿತು. ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಎಸ್.ಎಸ್.ಕೇರ್ ಲೈಫ್ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಉಡುಪಿ ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್ ಆಕಾಂಕ್ಷಿ

## ಕುಂಬಳೂರಿನಲ್ಲಿ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಹೇಳಿಕೆ



ಮಲೇಬೆನ್ನೂರು, ಸೆ. 27- ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಕ್ಕೆ ನಾನು ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ಆಕಾಂಕ್ಷಿಯಾಗಿದ್ದೇನೆ ಎಂದು ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಹೇಳಿದರು.

ಕಳೆದ ವಾರ ಉಡುಪಿಯಿಂದ ದಾವಣಗೆರೆಗೆ ತೆರಳುವ ಮಾರ್ಗ ಮಧ್ಯೆ ಕುಂಬಳೂರು ಗ್ರಾಮದ ಗಂಗಾ ಪರಮೇಶ್ವರಿ ದೇವಸ್ಥಾನಕ್ಕೆ ಆಗಮಿಸಿ, ಪೂಜೆ ಸಲ್ಲಿಸಿದ ನಂತರ ಗಂಗಾಮತ ಸಮಾಜದವರಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ನಾನು ಈ ಹಿಂದೆ ಉಡುಪಿ ಶಾಸಕನಾಗಿ, ಮೀನುಗಾರಿಕೆ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವನಾಗಿ, ಉಡುಪಿಯ ಜಿಲ್ಲಾ ಉಸ್ತುವಾರಿ ಸಚಿವನಾಗಿಯೂ ರಾಜ್ಯದಲ್ಲಿ ಮೀನುಗಾರರ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ ಎಂದರು.

ಗಂಗಾಮತ ಸಮಾಜದವರು ರಾಜ್ಯದಿಂದ ಈಗ ಯಾರೂ ಎಂಪಿ ಆಗಿಲ್ಲ. ಈ ಬಾರಿ ನನಗೆ ಅವಕಾಶ ಸಿಗುವ ಸಾಧ್ಯತೆ ಇದ್ದು, ಸಮಾಜದವರು ಬೆಂಬಲ ನೀಡಬೇಕೆಂದು ಪ್ರಮೋದ್ ಮಧ್ವರಾಜ್ ಮನವಿ ಮಾಡಿದರು.

ಹರಿಹರ ತಾ.ಪಂ. ಮಾಜಿ ಅಧ್ಯಕ್ಷ ಮಾಗಾನಹಳ್ಳಿ ಹಾಲಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಆರ್. ಹೆಚ್. ಬಸವರಾಜ್, ಕರಡೇರ ಸೋಮಣ್ಣ, ಕಡೇಮನಿ ಪುಟ್ಟಪ್ಪ, ಡಿ. ಕುಬೇರಪ್ಪ, ಕೆ. ಬಸವರಾಜ್, ಎಸ್.ಹೆಚ್. ಜಯ್ಯಪ್ಪ, ಬಾರ್ಕಿ ಚಂದ್ರಪ್ಪ, ಬಲ್ಲೂರು ನಾಗರಾಜ್, ಎಂ.ಹೆಚ್. ಪರಮೇಶ್ವರಪ್ಪ, ಎಂ.ಹೆಚ್. ರಮೇಶ್, ಎಂ. ವಾಸುದೇವಮೂರ್ತಿ, ನಿಟ್ಟೂರಿನ ನಾಗಣ್ಣ, ಅಂಜಿನಪ್ಪ, ಮಲೇಬೆನ್ನೂರು ಪುರಸಭೆ ಸದಸ್ಯ ಗೌಡ್ರ ಮಂಜಣ್ಣ, ಕಣ್ಣಾಳ್ ಧರ್ಮಣ್ಣ, ಕಣ್ಣಾಳ್ ಹನುಮಂತಪ್ಪ, ಮಲೇಬೆನ್ನೂರು ಹೋಬಳಿ ಗಂಗಾಮತ ಸಮಾಜದ ಅಧ್ಯಕ್ಷ ಪವನ್ ಕುಮಾರ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ನೀರಾವರಿ ನಿಗಮಕ್ಕೆ ಚಂದ್ರಶೇಖರಪ್ಪ



ದಾವ ಣಗೆರೆ, ಸೆ.27- ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ಜಿ.ಟಿ.ಚಂದ್ರಶೇಖರಪ್ಪ ಅವರನ್ನು ಕರ್ನಾಟಕ ನೀರಾವರಿ ನಿಗಮದ ನಿರ್ದೇಶಕರ ಮಂಡಳಿಯಲ್ಲಿ ಸ್ವತಂತ್ರ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ. ಜಲಸಂಪನ್ಮೂಲ ಇಲಾಖೆಯ ಅಧೀನ ಕಾರ್ಯದರ್ಶಿ ಎಸ್.ವಿಜಯಲಕ್ಷ್ಮಿ ಅವರು ಈ ಆದೇಶ ಮಾಡಿದ್ದಾರೆ.

## ಅಮ್ಜದ್ ನೇಮಕ



ದಾವಣಗೆರೆ, ಸೆ.27- ಜವಾಹರ್ ಬಾಲ್ ಮಂಚ್‌ನ ರಾಜ್ಯ ಸಾಮಾಜಿಕ ಜಾಲತಾಣದ ಉಸ್ತುವಾರಿಯಾಗಿ ಕೆ. ಅಮ್ಜದ್ ಖಾನ್ ನೇಮಕಗೊಂಡಿದ್ದಾರೆ.

# ದಾವಣಗೆರೆ ಪಿ ಎಲ್ ಡಿ ಬ್ಯಾಂಕ್ : 10 ಲಕ್ಷ ರೂ. ಲಾಭ



ದಾವಣಗೆರೆ, ಸೆ. 26 - ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ 2022 - 23 ನೇ ಸಾಲಿನಲ್ಲಿ 10 . 32 ಲಕ್ಷ ರೂ ಗಳ ಲಾಭವನ್ನು ಗಳಿಸಿದೆ ಎಂದು ಬ್ಯಾಂಕ್ ಅಧ್ಯಕ್ಷ ಎ.ಎಂ. ಮಂಜುನಾಥ್ ತಿಳಿಸಿದರು.

ಬ್ಯಾಂಕಿನ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 86 ವರ್ಷಗಳ ಇತಿಹಾಸ ಹೊಂದಿರುವ ಬ್ಯಾಂಕ್ ನಡೆದು ಬಂದ ದಾರಿಯನ್ನು ವಿವರಿಸಿದರು.

ವರದಿ ಸಾಲಿನಲ್ಲಿ ಬ್ಯಾಂಕ್ ಸದಸ್ಯರಿಂದ 12 , 87 , 058 ರೂ ಗಳ ಷೇರು ಮೊತ್ತವನ್ನು ಸಂಗ್ರಹಿಸಿದೆ. ಸಾಲಾಖೈರಿಗೆ 98 , 66 , 499 ರೂ ಗಳ ಪಾಲು ಬಂಡವಾಳವನ್ನು ಹೊಂದಿದೆ. ಸದಸ್ಯರಿಗೆ 2 , 72 , 71 , 290 . 85 ರೂ ಗಳ ಸಾಲವನ್ನು ನೀಡಿದೆ. ಸಾಲ ವಸೂಲಾತಿ ಪ್ರಮಾಣ ಶೇ 71 . 65 ರಷ್ಟು ಇದೆ ಎಂದು ಹೇಳಿದರು.

ಬ್ಯಾಂಕಿಗೆ ಸರ್ಕಾರದಿಂದ 0 - 05 ಗುಂಟೆ ಜಮೀನು ಮಂಜೂರಾಗಿದ್ದು, ಬ್ಯಾಂಕ್‌ಕಟ್ಟಡನಿರ್ಮಾಣ ಕಾರ್ಯಶೀಘ್ರವೇ ಆರಂಭವಾಗಲಿದ್ದು, ಸದಸ್ಯರು ಹೆಚ್ಚಿನ ಸಹಕಾರ ನೀಡಬೇಕೆಂದು ವಿನಂತಿಸಿದರು.

ಮಂಜುಳ ಪ್ರಾರ್ಥಿಸಿದರು. ರಮೇಶ್ ಸ್ವಾಗತಿಸಿದರು. ಕಾರ್ಯಕ್ರಮವನ್ನು ಒಡ್ಡಿನಹಳ್ಳಿ ಸಿದ್ದೇಶ್ ನಿರೂಪಿಸಿದರು. ಬಸವರಾಜಪ್ಪ ವಂದಿಸಿದರು.

ಬ್ಯಾಂಕಿನ ನಿರ್ದೇಶಕರಾದ ಆರ್.ಜಿ. ಕುಬೇಂದ್ರಪ್ಪ, ಕೆ.ಎಂ. ರೇವಣಸಿದ್ದಪ್ಪ , ಜಿ.ಎ. ಮಂಜುನಾಥ್, ಕೆ. ಬಸವರಾಜಪ್ಪ , ಬಿ.ಎಸ್ . ರಮೇಶ್ , ವೈ.ಬಿ. ನಾಗರಾಜ, ರಾಜಪ್ಪ, ಎಂ.ಪಿ. ದೇವೇಂದಪ್ಪ, ಶ್ರೀಮತಿ ಸಿ.ಯು. ಜ್ಯೋತಿ, ಶ್ರೀಮತಿ ಟಿ.ಎಂ. ಸವಿತ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶ್ರೀಮತಿ ಸರ್ವಮಂಗಳ ಮಳಿಮಠ್ ಉಪಸ್ಥಿತರಿದ್ದರು.

## ಶಿವಾನುಭವ ಸಂಪದ

ಹಾಲಕೆರೆ ಶ್ರೀ ಅನ್ನದಾನೀಶ್ವರ ಸಾರ್ವಜನಿಕ ಸೇವಾ ನ್ಯಾಸ ಟ್ರಸ್ಟ್ ವತಿಯಿಂದ ಇಂದು ಸಂಜೆ 6.30 ಕ್ಕೆ ಅನ್ನದಾನೀಶ್ವರ ಮಠದಲ್ಲಿ 263 ನೇ ಶಿವಾನುಭವ ಸಂಪದ, ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ. ವಿಶ್ರಾಂತ ಬಡ್ತಿ ಮುಖ್ಯ ಶಿಕ್ಷಕ ಕೆ.ಎಸ್. ನಾಗರಾಜಪ್ಪ ಉಪನ್ಯಾಸ ನೀಡಲಿದ್ದಾರೆ. ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಈ. ಬಸವರಾಜ್, ಸಹ ಶಿಕ್ಷಕಿ ಎಸ್. ಗಂಗಮ್ಮ ಇವರನ್ನು ಸನ್ಮಾನಿಸಲಾಗುವುದು.

# ಸೂಕ್ತ ಜಾಗದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸಚಿವರಿಗೆ ಮನವಿ

ದಾವಣಗೆರೆ, ಸೆ. 27- ನಗರದ ಮಧ್ಯಭಾಗದ ಸೂಕ್ತ ಸ್ಥಳದಲ್ಲಿ ಡಾ. ಅಂಬೇಡ್ಕರ್ ಭವನ ನಿರ್ಮಿಸುವಂತೆ ಒತ್ತಾಯಿಸಿ, ಅಕ್ಟೋಬರ್ 2 ರಂದು ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಅಂಬೇಡ್ಕರ್ ಭವನ ನಿರ್ಮಾಣ ಸಂಚಲನಾ ಸಮಿತಿ ಹಾಗೂ ದಲಿತ ಸಂಘಟನೆಗಳ ಮಹಾ ಒಕ್ಕೂಟದ ಪದಾಧಿಕಾರಿಗಳು ಮನವಿ ಸಲ್ಲಿಸಲಿದ್ದಾರೆಂದು ಸಮಿತಿಯ ಪ್ರೊ.ಎ.ಬಿ. ರಾಮಚಂದ್ರಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭವನ ನಿರ್ಮಾಣ ಆಗುವವರೆಗೆ ಹಂತ ಹಂತವಾಗಿ ಹೋರಾಟ ರೂಪಿಸಲಾಗುವುದು. ಈ ಹೋರಾಟದಲ್ಲಿ ಪ್ರಗತಿಪರ ಚಿಂತಕರು, ಅಂಬೇಡ್ಕರ್ ಅಭಿಮಾನಿಗಳು, ರೈತ, ಕಾರ್ಮಿಕ ಮುಖಂಡರು, ಮಹಿಳಾ ಹೋರಾಟಗಾರ್ತಿಯರು, ವಕೀಲರು, ವಿದ್ಯಾರ್ಥಿ ಯುವಜನರು, ವಿವಿಧ ತಳಸಮುದಾಯದ ಮುಖಂಡರು ಪಾಲ್ಗೊಂಡು ಯಶಸ್ವಿಗೊಳಿಸಲು ಮನವಿ ಮಾಡಿದರು.

ಇತ್ತೀಚಿಗೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹಾದೇವಪ್ಪ ದಾವಣಗೆರೆಗೆ ಭೇಟಿ ನೀಡಿದಾಗ ಅಂಬೇಡ್ಕರ್ ಭವನ ನಿರ್ಮಾಣದ ವಿಚಾರ ಮುನ್ನೆಲೆಗೆ ಬಂದು, ಈ ಬಾರಿ ಶತಾಯಗತಾಯ ಭವನ ನಿರ್ಮಾಣ ಮಾಡಿಸಲೇಬೇಕೆಂಬ ಉದ್ದೇಶದಿಂದ ದಲಿತ ಸಂಘಟನೆಗಳು, ರೈತ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು, ಪ್ರಗತಿ ಪರ ಚಿಂತಕರು, ಮಹಿಳಾ ಹೋರಾಟಗಾರ್ತಿಯರು, ವಕೀಲರು, ವಿವಿಧ ಶೋಷಿತ ವರ್ಗಗಳ ಮುಖಂಡರೂ ಸೇರಿ ಸಮಿತಿ ರಚಿಸಿಕೊಂಡು ಹೋರಾಟಕ್ಕಿಳಿಯಲಾಗಿದೆ ಎಂದರು.

ಈ ಹಿಂದೆ ಸಿದ್ಧರಾಮಯ್ಯ ನೇತೃತ್ವದ ಸರ್ಕಾರದ ಸಂದರ್ಭದಲ್ಲಿ ಅಂದಿನ ಸಮಾಜ ಕಲ್ಯಾಣ ಸಚಿವರಾಗಿದ್ದ ಹೆಚ್.ಆಂಜನೇಯ, ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಸ್.ಎಸ್. ಮಲ್ಲಿಕಾರ್ಜುನ್ ಸುಮಾರು 10 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಭವನ ನಿರ್ಮಾಣಕ್ಕೆ ಪ್ರಯತ್ನಗಳು ನಡೆದಿದ್ದವು. ಮಲ್ಲಿಕಾರ್ಜುನ್ ಅವರೇ ಸ್ವತಃ ಆಸಕ್ತಿ ವಹಿಸಿ ಭವನ ನಿರ್ಮಾಣದ ನೀಲನಕ್ಷೆ ತಯಾರು ಮಾಡಿಸಿ, ಸೂಕ್ತ ಸ್ಥಳದಲ್ಲಿ ಭವನ ನಿರ್ಮಿಸಿ ಕೊಡುವುದಾಗಿ ಹೇಳಿದ್ದರು. ಅದಾಗ್ಯೂ ಕಾಣದ ಕೈಗಳ ಕೈವಾಡದಿಂದ ಆ ಭರವಸೆಯೂ ಈಡೇರಲಿಲ್ಲ ಎಂದರು.

ಜನಪ್ರತಿನಿಧಿಗಳ, ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದಾಗಿ ಅಂಬೇಡ್ಕರ್ ಭವನ ನಿರ್ಮಾಣ ನೆನೆಗುದಿಗೆ ಬಿದ್ದಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಬಿ.ಎಂ. ಹನುಮಂತಪ್ಪ, ಹೆಗ್ಗೆರೆ ರಂಗಪ್ಪ, ಹೆಚ್. ಮಲ್ಲೇಶ್ ಹರಿಹರ, ಕುಂದುವಾಡ ಮಂಜುನಾಥ್, ಬಿ.ಎಸ್. ವಾಗೀಶ್, ಅನೀಸ್ ಪಾಷ, ಹೆಚ್. ತಿಮ್ಮಣ್ಣ, ಎಲ್. ಜಯಪ್ಪ, ಸಿ.ಬಸವರಾಜ್, ಸೋಮ್ಲಾಪುರದ ಹನುಮಂತಪ್ಪ ಮತ್ತಿತರರಿದ್ದರು.

# ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಜನತಾ ದರ್ಶನ

## ಹೊನ್ನಾಳಿ ತಾಲ್ಲೂಕಿನ ಹುಣಸಘಟ್ಟದಲ್ಲಿನ ಕಾರ್ಯಕ್ರಮದಲ್ಲಿ ಶಾಸಕ ಡಿ.ಜಿ. ಶಾಂತನಗೌಡ



ಹೊನ್ನಾಳಿ, ಸೆ. 27- ಸರ್ಕಾರದ ಸೌಲಭ್ಯಗಳನ್ನು ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೂ ತಲುಪಿಸುವ ನಿಟ್ಟಿನಲ್ಲಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಡಿ.ಜಿ.ಶಾಂತನಗೌಡ ತಿಳಿಸಿದರು.

ತಾಲ್ಲೂಕಿನ ಹುಣಸಘಟ್ಟದಲ್ಲಿ ಹಮ್ಮಿಕೊಳ್ಳಲಾಗಿದ್ದ ಜನತಾ ದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳಲ್ಲಿ ಮೊದಲನೆಯ ಸ್ತ್ರೀ ಶಕ್ತಿ ಯೋಜನೆಯ ಪ್ರಯೋಜನವನ್ನು ಇದುವರೆಗೂ 2 ಕೋಟಿ ಮಹಿಳೆಯರು ಪಡೆದುಕೊಂಡಿದ್ದಾರೆ. ಗೃಹ ಜ್ಯೋತಿ ಯೋಜನೆಯಡಿ ನೋಂದಣಿಯಾದವರೆಲ್ಲರಿಗೂ ಉಚಿತ ವಿದ್ಯುತ್ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ. ಅಕ್ಕಿ ಉಳಿದಂತೆ ಹಣವನ್ನು ಅವರವರ ಖಾತೆಗೆ ಜಮಾ ಮಾಡಲಾಗುತ್ತಿದೆ.

ಗೃಹ ಲಕ್ಷ್ಮಿ ಯೋಜನೆಯಡಿಯಲ್ಲೂ ಆಯಾ ಕುಟುಂಬದ ಯಜಮಾನಿಗೆ ತಲಾ 2000 ಹಣ ಜಮೆಯಾಗುತ್ತಿದೆ. ಗೃಹ ಲಕ್ಷ್ಮಿ ಯೋಜನೆಯಡಿ ಯಾರಿಗೆ ಇನ್ನೂ ಹಣ ಸಂದಾಯವಾಗಿಲ್ಲ ಅವರ ಪಟ್ಟಿಯನ್ನೂ ಸಂಗ್ರಹಿಸಿ ಅವರ ಖಾತೆಗಳಿಗೆ ಹಣ ಬಾರದಿರುವ ಕಾರಣ ಪತ್ತೆ ಹಚ್ಚಿ ಶೀಘ್ರದಲ್ಲೇ ಅವರ ಖಾತೆಗಳಿಗೂ ಹಣ ಸಂದಾಯ ಮಾಡುವ ವ್ಯವಸ್ಥೆ ಮಾಡಲಾಗುವುದು ಯಾರೂ ಈ ಬಗ್ಗೆ ಆತಂಕ ಪಡಬೇಕಾಗಿಲ್ಲ ಎಂದು ಭರವಸೆ ನೀಡಿದರು.

ಹಳ್ಳಿಗಳಲ್ಲಿನ ಸಾಕಷ್ಟು ಸಮಸ್ಯೆಗಳಿಗೆ ಅಧಿಕಾರಿಗಳು ಸಿಗುತ್ತಿಲ್ಲ ಎಂಬ ದೂರುಗಳ ಹಿನ್ನೆಲೆಯಲ್ಲಿ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುವ ನಿಟ್ಟಿನಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದ್ದು, ರೈತ ಸಮುದಾಯ ಮೊದಲೇ ಬರಗಾಲದ ಛಾಯೆಯಿಂದ ನಲುಗಿ ಹೋಗಿದ್ದು, ಅಧಿಕಾರಿಗಳು ಯಾವುದೇ ಕಾರಣ ಹೇಳದೇ ಅವರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಸೂಚಿಸಿದರು.

ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ಜನಸಾಮಾನ್ಯರ ಕೆಲಸಗಳನ್ನು ಅವರ ಮನೆ ಬಾಗಿಲಿಗೇ ತಲುಪಿಸುವ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಯಶಸ್ವಿಗೆ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಸರ್ಕಾರಕ್ಕೆ ಒಳ್ಳೆಯ ಹೆಸರು ತರುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೆಂದು ಸಲಹೆ ನೀಡಿದರು.

ತಹಶೀಲ್ದಾರ್ ಪಟ್ಟರಾಜೇಗೌಡ ಅವರು ಮಾತನಾಡಿ, ಜನತಾ ದರ್ಶನ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ ಒಟ್ಟು 95 ಅರ್ಜಿಗಳು ಬಂದಿದ್ದು, ಅವುಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಜರುಗಿಸಲಾಗುವುದು ಎಂದು ತಿಳಿಸಿದರು. ಸಿಡಿಪಿಓ ಇಲಾಖೆಯ ವತಿಯಿಂದ ಪೋಷಣ್ ಅಭಿಯಾನದಡಿ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮವನ್ನು ಸಿಡಿಪಿಓ ಮಹಾಂತಸ್ವಾಮಿ ಪೂಜಾರ್ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯ್ತಿ ಇಓ ಎಚ್.ವಿ.ರಾಘವೇಂದ್ರ, ಸಮಾಜ ಕಲ್ಯಾಣಾಧಿಕಾರಿ ಎಚ್. ಎಲ್.ಉಮಾ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ಪ್ರತಿಮಾ, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕಿ ರೇಖಾ, ಬಿಇಓ ಎಸ್.ಸಿ. ನಂಜರಾಜ್, ಅರಣ್ಯಾಧಿಕಾರಿ ಷಣ್ಮುಖ, ಉಪತಹಶೀಲ್ದಾರ್ ಚಂದ್ರಪ್ಪ, ಯುಟಿಪಿ ಎಇಇ ಕೆ.ಎನ್. ಮಂಜುನಾಥ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಎಂಜಿನಿಯರ್ ಸೋಮ್ಲಾನಾಯ್ಕ್, ಜಿ.ಪಂ. ಎಂಜಿನಿಯರ್ ಮೋತಿಲಾಲ್, ಜಿ.ಪಂ. ಮಾಜಿ ಅಧ್ಯಕ್ಷೆ ಶೀಲಾ ಗದ್ದಿಗೇಶ್, ಪಿಡಿಓ ಪರಮೇಶ್, ಎಸ್ಡಿಎಂಸಿ ತಾಲ್ಲೂಕು ಅಧ್ಯಕ್ಷ ಶಿವಲಿಂಗಪ್ಪ, ಗ್ರಾಪಂ ಅಧ್ಯಕ್ಷೆ ಶೃತಿ ವೀರೇಶ್, ಉಪಾಧ್ಯಕ್ಷೆ ರಹಮತ್ ಬೀ ಮತ್ತು ಗ್ರಾಪಂ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

## ಹಿರಿಯ ನಾಗರಿಕರ ದಿನ

ದಾವಣಗೆರೆ, ಸೆ. 27- ವಿನೂತನ ಮಹಿಳಾ ಸಮಾಜದ ವತಿಯಿಂದ ಅಕ್ಟೋಬರ್ 2ರಂದು ಹಿರಿಯ ನಾಗರಿಕರ ದಿನಾಚರಣೆ ಆಚರಿಸಲಾಗುವುದು ಎಂದು ಸಮಾಜದ ಅಧ್ಯಕ್ಷರಾದ ಚಂದ್ರಿಕಾ ಮಂಜುನಾಥ್ ತಿಳಿಸಿದ್ದಾರೆ. ನಗರ ಹಾಗೂ ಸುತ್ತಮುತ್ತಲಿನ 60 ವರ್ಷ ಮೇಲ್ಪಟ್ಟ ಪುರುಷರು ಹಾಗೂ ಮಹಿಳೆಯರಿಗೆ ಆಟಗಳನ್ನು ಆಡಿಸ ಲಾಗುವುದು. ಮಾಹಿತಿಗಾಗಿ ಹೇಮಾ ಜಿ. ಶೇಟ್ (87623 91940), ಪುಷ್ಪಾ ಬಸವರಾಜ್ (9481670455) ಇವರನ್ನು ಸಂಪರ್ಕಿಸಬಹುದಾಗಿದೆ.

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಸೆ.27- ಬ್ರಾಹ್ಮಣ ಸಮಾಜ ಸೇವಾ ಸಂಘದಡಿಯಲ್ಲಿ ಹಲವು ದಾನಿಗಳ ಸಹಾಯದಿಂದ ಸ್ಥಾಪಿಸಿರುವ ದತ್ತಿ ನಿಧಿಯಿಂದ ಆರ್ಥಿಕ ವಾಗಿ ಹಿಂದುಳಿದ ಹಾಗೂ ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿರುವ ನಗರ ವ್ಯಾಪ್ತಿಗೆ ಬರುವ ತ್ರಿಮತಸ್ಥ ಬ್ರಾಹ್ಮಣ ಸಮಾಜದ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಪಿಯುಸಿ ಹಾಗೂ ಡಿಗ್ರಿ ಮಟ್ಟದ ವ್ಯಾಸಂಗ ಮಾಡುತ್ತಿರುವವರಾಗಿರಬೇಕು. ಅರ್ಜಿಗಳು ಬ್ರಾಹ್ಮಣ ಸಮಾಜ ಸೇವಾ ಸಂಘದ ಕಾರ್ಯಾಲಯ ದಲ್ಲಿ ಲಭ್ಯವಿದ್ದು, ಪೂರ್ಣಗೊಳಿಸಿದ ಅರ್ಜಿಯನ್ನು ನಾಳೆ ದಿನಾಂಕ 28 ರೊಳಗಾಗಿ ಸಲ್ಲಿಸಬೇಕಾಗಿದ್ದು, ವಿವರಕ್ಕಾಗಿ 9483860040, 9448566549 ಸಂಪರ್ಕಿಸಲು ಸಂಘದ ಅಧ್ಯಕ್ಷ ಡಾ. ಎಂ.ಸಿ. ಶಶಿಕಾಂತ್ ತಿಳಿಸಿದ್ದಾರೆ.


WALK IN INTERVIEW

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Accountants (Junior) | 10 | B.Com / M.Com / MBA FICO / SAP | 0-1 |
| 02 | Accounts (Senior) | 05 | Bcom / Mcom / MBA GST / INCOME TAX / SAP / FICO | 5 |
| 03 | Sales Executives for marketing retail & Project. with 2-wheeler | 10 | Any Degree (Diploma/ITI) | 0-1 |

HULLUMANE PROPERTIES & POWER PVT LTD.,
# Depot Address - L 13, Lokikere Industrial Area, Opp. Davangere Wire Rope Industry, Lokikere Road, Davangere-577 005. Karnataka
Drop Resume to Email - hrhullumanepropertiespwr@yahoo.com

ಈದ್ ಮಿಲಾದ್ ಶುಭಾಶಯಗಳು


ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು
ತಂಜೀಮುಲ್-ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ (ರಿ)
ನೂರಾನಿ ಶಾದಿ ಮಹಲ್, ಜೆ. ಇಮಾಂ ನಗರ, ದಾವಣಗೆರೆ.

# ಯುವ ವಕೀಲರಿಗೆ ತರಬೇತಿ ಅಗತ್ಯ

## ಅಧಿವಕ್ತ ಪರಿಷತ್ ಸಂಸ್ಥಾಪನಾ ದಿನಾಚರಣೆಯಲ್ಲಿ ನ್ಯಾ. ಕರೆಣ್ಣವರ್



ದಾವಣಗೆರೆ, ಸೆ. 27 - ಯುವ ವಕೀಲರಿಗೆ ಕಾನೂನು ಸೇರಿದಂತೆ ವಿವಿಧ ಇಲಾಖೆಗಳ ಕಾರ್ಯಚಟುವಟಿಕೆಗಳ ಮಾಹಿತಿ ಕುರಿತು ಕಾರ್ಯಾಗಾರಗಳ ಮೂಲಕ ತರಬೇತಿ ನೀಡುವ ಅಗತ್ಯವಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ್ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಅಧಿವಕ್ತ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ ದಾವಣಗೆರೆ ಘಟಕದ ವತಿಯಿಂದ ಏರ್ಪಡಿಸಿದ್ದ ಅಧಿ ವಕ್ತ ಪರಿಷತ್ ಸಂಸ್ಥಾಪನಾ ದಿನಾಚರಣೆ ಕಾರ್ಯ ಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾರ್ವಜನಿಕರಿಗೆ ಉಪಯುಕ್ತ ಮಾಹಿತಿ ನೀಡುವ ಸಂಘಟನೆ ಇದಾಗಿದ್ದು, ನಿರಂ ತರವಾಗಿ ಕಾರ್ಯ ಕ್ರಮಗಳನ್ನು ನಡೆಸುವ ಮೂಲಕ ಪ್ರತಿಯೊಬ್ಬರಿಗೂ ಕಾನೂನಿನ ತಿಳಿವಳಿಕೆ ನೀಡಬೇಕಾಗಿದೆ ಎಂದರು.

ನ್ಯಾಯಾಧೀಶರನ್ನು ಒಳಗೊಂಡಂತೆ ಯುವ ವಕೀಲರಿಗೆ ತರಬೇತಿ ಕಾರ್ಯಾಗಾರ ಗಳನ್ನು ಹಮ್ಮಿಕೊಳ್ಳುವ ಅವಶ್ಯವಿದೆ. ಆಸ್ತಿ ದಾಖಲೆ ಬಗ್ಗೆ ಸೂಕ್ತ ತಿಳಿವಳಿಕೆ, ಪರಿಶೀಲನೆ, ಅಗತ್ಯ ಇದ್ದರೆ ತಿದ್ದುಪಡಿ ಮಾಡಿಕೊಳ್ಳ ಬೇಕಾಗಿದೆ ಎಂದು ತಿಳಿಸಿದರು

ವಕೀಲರಾದ ಎಂ.ಎಸ್. ಮನೋಜ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಹಿಂದುಳಿದ ವರ್ಗದ ಯುವ ವಕೀಲರಿಗೆ ವಿಚಾರ ಸಂಕಿರಣಗಳು, ಕಾರ್ಯಾಗಾರಗಳ ಮೂಲಕ ಕಾನೂನು, ಹೊಸ ಕಾಯಿದೆ, ತಿದ್ದುಪಡಿಗಳ ಬಗ್ಗೆ ಮಾಹಿತಿ ನೀಡಲಾಗುವುದು ಎಂದರು.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಕಾನೂನಿನ ತಿಳಿವಳಿಕೆ ನೀಡುವ ಉದ್ದೇಶ ಅಧಿವಕ್ತ ಪರಿಷತ್ ಹೊಂದಿದೆ. ಅತಿ ಹೆಚ್ಚು ಸದಸ್ಯರನ್ನು ಹೊಂದಿದ ಸಂಸ್ಥೆಯಾಗಿದೆ. ಜಿಲ್ಲೆಯಲ್ಲಿ 350 ರಿಂದ 400 ಜನ ವಕೀಲರು ಸದಸ್ಯರಾಗಿದ್ದಾರೆಂದು ತಿಳಿಸಿದರು.

ಭೂ ಮಾಪನಾ ಇಲಾಖೆ ನಿವೃತ್ತ ಪರ್ಯಾವೇಕ್ಷಕ ಡಾ.ಎಸ್. ರಂಗನಾಥ್ 'ಭೂ ಮಾಪನ ಮತ್ತು ಭೂ ದಾಖಲಾತಿಗಳ' ಬಗ್ಗೆ ಉಪನ್ಯಾಸ ನೀಡಿದರು.

ಪರಿಷತ್ ಅಧ್ಯಕ್ಷ ಎಲ್. ದಯಾನಂದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ವಕೀಲರಾದ ಬಿ.ಇ. ವನಜಾಕ್ಷಿ ಉಪಸ್ಥಿತರಿದ್ದರು. ಕಾರ್ಯದರ್ಶಿ ವಿ. ವಸಂತಕುಮಾರ್ ಸ್ವಾಗತಿಸಿದರು.

# ಕಲಾವಿದರ ನೆರವಿಗೆ ಎಸ್ಸೆಸ್ ಕೇರ್ ಟ್ರಸ್ಟ್ ಸಿದ್ಧ : ಡಾ.ಪ್ರಭಾ



ದಾವಣಗೆರೆ, ಸೆ. 27- ಕಲಾವಿದರ ಒಳಿತಿಗಾಗಿ ಎಸ್ಎಸ್ ಕೇರ್ ಟ್ರಸ್ಟ್ ಮೂಲಕ ಅಗತ್ಯವಿರುವ ನೆರವು ನೀಡಲು ಸಿದ್ಧರಿರುವುದಾಗಿ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ತೊಗಟವೀರ ಸಮುದಾಯ ಭವನದಲ್ಲಿ ಬುಧವಾರ ದಾವಣಗೆರೆ ಚಿತ್ರಕಲಾ ಪರಿಷತ್ ವತಿಯಿಂದ ಹಿಂದೂ ಯುವ ಶಕ್ತಿ ಸಂಘಟನೆ ಸಹಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ 'ವರ್ಣ ಗಣೇಶ' ಚಿತ್ರಕಲಾ ಪ್ರದರ್ಶನದ ಸಮಾರೋಪ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಚಿತ್ರ ಕಲಾವಿದರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಈ ಹಿಂದೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಸ್ವತಃ ಕಲಾವಿದರು ತಮ್ಮ ಸಮಸ್ಯೆಗಳನ್ನು ನನ್ನ ಬಳಿ ಹೇಳಿದ್ದರು. ಈ ಹಿನ್ನೆಲೆಯಲ್ಲಿ ಅವರಿಗೆ ನೆರವು ನೀಡುವ ಚಿಂತನೆ ಇದೆ ಎಂದರು.

ಚಿತ್ರ ಕಲಾವಿದರ ಕೆಲಸ ಸುಲಭವಾದುದಲ್ಲ. ಒಂದು ಕಲಾಕೃತಿ ಹಿಂದೆ ಇರುವ ಕಲಾವಿದರ ಕಠಿಣ ಪರಿಶ್ರಮದ ಅರಿವು ನಮಗಿದೆ. ಕಲಾವಿದನಿಗೆ ನಿಖರತೆ ಇರಬೇಕು. ಆಗ ಮಾತ್ರ ಕಲಾಕೃತಿ ಸುಂದರವಾಗಿ ಮೂಡಿ ಬರುತ್ತದೆ ಎಂದು ಹೇಳಿದರು.

ಮುಂಬರುವ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ನಗರದ ಗಾಜಿನ ಮನೆಯಲ್ಲಿ ಫಲಪುಷ್ಪ ಪ್ರದರ್ಶನದ ಜತೆಗೆ, ಗಾಜಿನ ಮನೆಯ ಒಂದು ಭಾಗದಲ್ಲಿ ನಗರದ ಚಿತ್ರ ಕಲಾವಿದರು ತಾವು ರಚಿಸಿದ ಚಿತ್ರಗಳನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಿಕೊಡಲಾಗುವುದು. ಇದರಿಂದ ಕಲಾವಿದರಿಗೆ ಹೆಚ್ಚು ಮಾನ್ಯತೆ ದೊರೆಯುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ಚಿತ್ರಕಲಾ ಪರಿಷತ್ ಅಧ್ಯಕ್ಷ ಸದಾನಂದ ಹೆಗಡೆ, ಕೊರೊನಾ ಅವಧಿ ಮತ್ತು ನಂತರದ ದಿನಗಳಲ್ಲಿ ಚಿತ್ರಕಲಾವಿದರು ಎದುರಿಸುತ್ತಿರುವ ಸಮಸ್ಯೆಗಳು, ಚಿತ್ರಕಲಾ ಪರಿಷತ್ ಆರಂಭವಾದ ಬಗೆ ಕುರಿತು ಮಾಹಿತಿ ನೀಡಿದರು.

ಪರಿಷತ್ ಕಾರ್ಯದರ್ಶಿ ಡಿ. ಶೇಷಾಚಲ, ಎ. ಮಹಾಲಿಂಗಪ್ಪ, ರಾಮನಾಥ್, ಡಿ.ಡಿ. ಬಸಣ್ಣ, ದತ್ತಾತ್ರೇಯ ಭಟ್, ಶಾಂತಯ್ಯ ಪರಡಿಮಠ, ಬಿ. ಅಚ್ಯುತಾನಂದ, ಚಂದ್ರಶೇಖರ ಸಂಗಾ, ಆರ್. ಶಿವಕುಮಾರ್, ರಂಗನಾಥ ಕುಲಕರ್ಣಿ, ಪ್ರಶಾಂತ್ ಕಲಾಕುಠೀರ, ಚಂದ್ರಶೇಖರ ತೆಗ್ಗಿನಮಠ, ಡಿ.ಕೆ. ಅಶೋಕ, ಹರಿಶ್ಚಂದ್ರ ಪತ್ತಾರ್, ಸಂತೋಷ್ ಕುಲಕರ್ಣಿ ಇತರರಿದ್ದರು.

## ಶಿಕ್ಷಕರ ಸಂಘಕ್ಕೆ ಮಂಜುನಾಥ್ ಆಯ್ಕೆ



ಮಲೇಬೆನ್ನೂರು, ಸೆ.27- ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘಕ್ಕೆ ರಾಜ್ಯ ಪರಿಷತ್ ಸದಸ್ಯರಾಗಿ ಬೂದಿಹಾಳ್ ಗ್ರಾಮದ ಪಿ ಮತ್ತು ಬಿ ಬಸವನಗೌಡರ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ ಭಾನುವಳ್ಳಿಯ ಜೆ.ಆರ್. ಮಂಜುನಾಥ್ ಆಯ್ಕೆಯಾಗಿದ್ದಾರೆ.

# ಉದ್ಯೋಗ ಮೇಳದ ಸದ್ಬಳಕೆಗೆ ಕರೆ



ದಾವಣಗೆರೆ, ಸೆ.27- ಬೃಹತ್ ಉದ್ಯೋಗ ಮೇಳವನ್ನು ಅಕ್ಟೋಬರ್ ಮಾಹೆಯಲ್ಲಿ ನಗರದ ಹೈಸ್ಕೂಲ್ ಮೈದಾನದಲ್ಲಿ ನಡೆಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಬೃಹತ್ ಉದ್ಯೋಗ ಮೇಳದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕುಟುಂಬದ ಆರ್ಥಿಕ ಅಭಿವೃದ್ಧಿಗೆ ಉದ್ಯೋಗ ಎಂಬುದು ಮಹತ್ವ ಪೂರ್ಣವಾಗಿರುತ್ತದೆ. ಜಿಲ್ಲೆಯಲ್ಲಿ ಅನೇಕ ವಿದ್ಯಾವಂತ ಯುವಕ, ಯುವತಿಯರಿದ್ದು, ಉದ್ಯೋಗವಿಲ್ಲದೇ ನಿರುದ್ಯೋಗಿಗಳಾಗಿದ್ದಾರೆ. ಈ ಬೃಹತ್ ಉದ್ಯೋಗ ಮೇಳದ ಮೂಲಕ ಯುವ ಜನತೆಗೆ ಉದ್ಯೋಗಾವಕಾಶ ಕಲ್ಪಿಸುವುದು ಇದರ ಉದ್ದೇಶವಾಗಿದೆ ಎಂದರು.

ಉದ್ಯೋಗ ಮೇಳದಲ್ಲಿ ವಿವಿಧ ಜಿಲ್ಲೆಗಳಲ್ಲಿನ ಹೆಸರಾಂತ ಗಾರ್ಮೆಂಟ್ಸ್ ಕಂಪನಿಗಳು, ಇತರೆ ಬೃಹತ್ ಕೈಗಾರಿಕೆಗಳ ಉದ್ಯಮಿಗಳು ಭಾಗವಹಿಸಲು ಆಮಂತ್ರಿಸಲಾಗುತ್ತದೆ. ಉದ್ಯೋಗ ಮೇಳದ ಬಗ್ಗೆ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಚಾರ ಕೈಗೊಂಡು ಯುವಕ, ಯುವತಿಯರು ಮೇಳದಲ್ಲಿ ಭಾಗವಹಿಸುವಂತೆ ಹೆಚ್ಚಿನ ಪ್ರಚಾರ ಕೈಗೊಳ್ಳಲು ಸೂಚನೆ ನೀಡಿದರು. ಬೃಹತ್ ಉದ್ಯೋಗ ಮೇಳದಲ್ಲಿ ಕನಿಷ್ಠ ಒಂದು ಸಾವಿರ ಯುವ ಜನರಿಗೆ ಉದ್ಯೋಗ ದೊರಕಿಸಿಕೊಡಬೇಕೆಂಬ ಗುರಿ ಹೊಂದಲಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ನಾಗರಾಜ್ ಕೆ, ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣಾಧಿಕಾರಿ ಮಲ್ಲಿಕಾರ್ಜುನ್ ಮಠದ್ ಉಪಸ್ಥಿತರಿದ್ದರು.

## ಸುಸ್ಥಿರ ಬೆಳವಣಿಗೆ ಖಾಸಗಿ ವಲಯದ ಹೊಣೆ : ಬೆರಿ

ನವದೆಹಲಿ, ಸೆ. 27 – ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಸೌಲಭ್ಯಗಳನ್ನು ಕಲ್ಪಿಸುತ್ತಿದೆ.

ಆದರೆ, ದೇಶವನ್ನು ಸುಸ್ಥಿರ ಬೆಳವಣಿಗೆಯ ಹಾದಿಗೆ ತರುವ ಹೊಣೆ ಖಾಸಗಿ ವಲಯದ ಮೇಲಿದೆ ಎಂದು ನೀತಿ ಆಯೋಗದ ಉಪಾಧ್ಯಕ್ಷ ಸುಮನ್ ಬೆರಿ ಹೇಳಿದ್ದಾರೆ.

ದೇಶದ ಸಂಶೋಧನೆ ಹಾಗೂ ಅಭಿವೃದ್ಧಿಯಲ್ಲಿ ಖಾಸಗಿ ವಲಯ ಶೇ.40ರ ಪಾಲು ಹೊಂದಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಈ ಪಾಲು ಶೇ.70ರಷ್ಟಾಗಿದೆ ಎಂದು ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಬೆರಿ ತಿಳಿಸಿದ್ದಾರೆ.ನಾವು ಮಧ್ಯಮ ಆದಾಯದ ಸುಳಿಯಿಂದ ಹೊರ ಬಂದು ಅಭಿವೃದ್ಧಿ ಕಾಣಬೇಕಿದೆ.

ಈ ಹಿನ್ನೆಲೆಯಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಗೆ ಖಾಸಗಿ ವಲಯ ಹೆಚ್ಚಿನ ಹಣ ತೊಡಗಿಸಬೇಕಿದೆ ಎಂದವರು ತಿಳಿಸಿದ್ದಾರೆ.

# ಸನ್ಮತಿ ಸಹಕಾರಿಗೆ 10.79ಲಕ್ಷ ರೂ. ನಿವ್ವಳ ಲಾಭ

## ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿಯ ಅಧ್ಯಕ್ಷ ಟಿ.ಎಂ.ಪಾಲಾಕ್ಷ ಸಂತಸ



ದಾವಣಗೆರೆ, ಸೆ. 27- ನಗರದ ಸನ್ಮತಿ ಸೌಹಾರ್ದ ಸಹಕಾರಿ ಸಂಘ ನಿಯಮಿತದ 2022-23ನೇ ಸಾಲಿನ ಆರನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ರೋ ಟರಿ ಬಾಲಭವನದಲ್ಲಿ ನಡೆಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಹಕಾರಿಯ ಅಧ್ಯಕ್ಷ ಟಿ. ಎಂ. ಪಾಲಾಕ್ಷ ಮತ್ತು ಸಹಕಾರಿಯ ನಿರ್ದೇಶಕ ಮಂಡಳಿಯ ವರು ದೀಪ ಬೆಳಗಿಸುವ ಮೂಲಕ ಸಭೆಯನ್ನು ಉದ್ಘಾಟಿಸಿದರು.

ಅಧ್ಯಕ್ಷ ಪಾಲಾಕ್ಷ ಮಾತನಾಡಿ, ಸದಸ್ಯ ಗ್ರಾಹಕರಿಗೆ ಅನುಕೂಲವಾಗಲು ಎಲ್ಲಾ ರೀತಿ ಖಾತೆಗಳಿಗೆ ಎಸ್ಎಂಎಸ್ ಸೌಲಭ್ಯ ಕಲ್ಪಿಸಲಾಗಿದ್ದು, ಸಹ ಕಾರಿಯ ಸದಸ್ಯರ ಮರಣೋತ್ತರ ನಿಧಿಯ ನ್ನು ರೂ. 5000/- ಕ್ಕೆ ಹೆಚ್ಚಿಸಿದ್ದು, ಸದಸ್ಯರಿಗೆ 1 ಲಕ್ಷ ರೂ.ಗಳವರೆಗೆ ಅಪಘಾತ ವಿಮೆ ಮಾಡಿಸಲಾಗಿದ್ದು ಮತ್ತು ಅಪಘಾತದಲ್ಲಿ ಮರಣ ಹೊಂದಿದ್ದ ಸದಸ್ಯರ ವಾರಸುದಾರರಿಗೆ 1 ಲಕ್ಷ ರೂ. ಕೊಡಿಸಲಾಗಿದೆ ಎಂದು ತಿಳಿಸಿದರು.

ಸಹಕಾರಿಯು 31.03. 2023ಕ್ಕೆ 24.47 ಲಕ್ಷ ರೂ. ಷೇರು ಬಂಡವಾಳ ಹೊಂದಿದ್ದು, ನಿಧಿಗಳು 30.12 ಲಕ್ಷ ರೂ. ಆಗಿದ್ದು, 3.41 ಕೋಟಿ ರೂ, ಠೇವಣಿ ಸಂಗ್ರಹಿಸಲಾಗಿದೆ. 3.03 ಕೋಟಿ ರೂ. ಸಾಲ ಮತ್ತು ಮುಂಗಡಗಳಾಗಿದ್ದು, 4.08 ಕೋಟಿ ರೂ. ದುಡಿಯುವ ಬಂಡವಾಳವಿದ್ದು. 10.79 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ.

ಪ್ರಸಕ್ತ ಸಾಲಿನ ಸುಸ್ತಿ ಬಾಕಿಗೆ 4.78 ಲಕ್ಷ ಪ್ರಾವಿಷನ್ ಮಾಡಲಾಗಿದೆ ಎಂದು ತಿಳಿಸಿ ಕೇವಲ 6 ವರ್ಷಗಳಲ್ಲಿ ಸೌಹಾರ್ದ ಸಹಕಾರಿ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿದೆ ಎಂದು ಪಾಲಾಕ್ಷ ಅವರು ಸಂತಸ ವ್ಯಕ್ತಪಡಿಸಿದರು.

ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಠೇವಣಿ ಸಂಗ್ರಹಿಸಿ, ಹೆಚ್ಚಿನ ಸಾಲ ಸೌಲಭ್ಯವನ್ನು ಸದಸ್ಯರಿಗೆ ಕಲ್ಪಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು. ಹಾಗೆ ನಮ್ಮ ಸಹಕಾರಿ ಸಂಘದ ಪಿಗ್ಮಿ ಸಂಗ್ರಹ ಕಾರ ಬಿ.ಬಂಗಾರಪ್ಪನವರ ಮಗಳು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಜರ್ಮನಿಗೆ ಹೋಗುತ್ತಿರುವುದಕ್ಕೆ ಸಹಕಾರಿಯ ವಾರ್ಷಿಕ ಮಹಾಸಭೆಯಲ್ಲಿ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಿ, ಶುಭ ಹಾರೈಸಲಾಯಿತು.

ವಾರ್ಷಿಕ ಮಹಾಸಭೆಯ ನಡವಳಿಕೆಯನ್ನು ಅಕೌಂಟೆಂಟ್ ಎನ್.ಪಿ.ಹರೀಶ್ ಓದಿದರು. ಅಢಾವೆ ಪತ್ರವನ್ನು ಮತ್ತು ಲಾಭ-ನಷ್ಟದ ತಃಖ್ತೆಯನ್ನು ನಿರ್ದೇಶಕ ನ್ಯಾಮತಿ ವಾಮದೇವ್ ಓದಿದರು. ಬಜೆಟ್ಟನ್ನು ಸಹಕಾರಿ ಅಧ್ಯಕ್ಷರು ಓದಿ ಅನುಮೋದನೆ ಪಡೆದರು.

2022-2023ನೇ ಸಾಲಿನ ಗುರಿ, ಯೋಜನೆಯ ವಿವರವನ್ನು ನಿರ್ದೇಶಕ ಪ್ರಸಾದ್ ವಿ. ರಾಯ್ಕರ್ ಓದಿ ಅನುಮೋದನೆ ಪಡೆದರು.

ನಿರ್ದೇಶಕರುಗಳಾದ ಎನ್. ಹೆಚ್. ಪ್ರಕಾಶಚಾರಿ, ಸಿ.ಜಿ. ವೀರೇಶ್, ರಾಜೇಶ್ವರಿ ಮುರುಗೇಶ್, ಪ್ರಸಾದ್ ವಿ.ರಾಯ್ಕರ್, ಡಿ. ರುದ್ರೇಶ್, ಡಿ.ಆರ್. ಸ್ಮಿತಾ, ನ್ಯಾಮತಿ ವಾಮದೇವ್, ಸಿ. ನರಸಿಂಹ ಮೂರ್ತಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕು. ವರ್ಷಿಣಿ ಪ್ರಾರ್ಥಿಸಿದರು. ನಿರ್ದೇಶಕ ನರಸಿಂಹ ಮೂರ್ತಿ ಸ್ವಾಗತಿಸಿದರು.

# ಆಸ್ಪತ್ರೆಯ ರಕ್ತದಿಂದ ಯೋಧನಿಗೆ ಹೆಚ್.ಐ.ವಿ. 1.5 ಕೋ. ರೂ. ಪರಿಹಾರ ನೀಡಲು ಆದೇಶ

ನವದೆಹಲಿ, ಸೆ. 27 – 2002ರಲ್ಲಿ ಜಮ್ಮು ಮತ್ತು ಕಾಶ್ಮೀರದ ಸೈನಿಕ ಆಸ್ಪತ್ರೆಯಲ್ಲಿ ರಕ್ತ ಪಡೆಯುವಾಗ ಹೆಚ್.ಐ.ವಿ. ಸೋಂಕಿಗೆ ಸಿಲುಕಿದ ಹಿರಿಯ ಯೋಧನಿಗೆ 1.5 ಕೋಟಿ ರೂ. ಪರಿಹಾರ ನೀಡುವಂತೆ ವಾಯುಪಡೆಗೆ ಸುಪ್ರೀಂ ಕೋರ್ಟ್ ತಿಳಿಸಿದೆ.

2001ರಲ್ಲಿ ಭಾರತದ ಸಂಸತ್ತಿನ ಮೇಲೆ ಉಗ್ರವಾದಿ ದಾಳಿ ನಡೆದ ನಂತರ ಆಪರೇಷನ್ ಪರಾಕ್ರಮ ಕಾರ್ಯಾಚರಣೆ ನಡೆಸಲಾಗಿತ್ತು. ಆಗ ಹಿರಿಯ ಯೋಧ ಗಾಯಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಿ ಒಂದು ಬಾಟಲಿ ರಕ್ತ ನೀಡಲಾಗಿತ್ತು.

ಈ ಸಂದರ್ಭದಲ್ಲಿ ವೈದ್ಯಕೀಯ ನಿರ್ಲಕ್ಷ್ಯದ ಕಾರಣದಿಂದಾಗಿ ಹೆಚ್.ಐ.ವಿ. ಸೋಂಕು ತಗುಲಿದೆ. ಇದಕ್ಕಾಗಿ 1,54,73,000 ರೂ. ಪರಿಹಾರ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

ಈ ವಿಷಯದಲ್ಲಿ ವ್ಯಕ್ತಿಗತ ಹೊಣೆ ಮಾಡಲಾಗದು. ಈ ಹಿನ್ನೆಲೆಯಲ್ಲಿ ವಾಯುಪಡೆ ಹಾಗೂ ಭಾರತೀಯ ಸೈನ್ಯಗಳು ಹೊಣೆ ಹೊರಬೇಕು. ಇಡೀ ಪರಿಹಾರವನ್ನು ಆರು ವಾರಗಳಲ್ಲಿ ಪಾವತಿಸಬೇಕು ಎಂದು ತಿಳಿಸಲಾಗಿದೆ.

## ದಿ ದಾವಣಗೆರೆ ಕ್ಲಬ್ (ರಿ).,ದಾವಣಗೆರೆ.

### 88ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ

ದಿನಾಂಕ 28.09.2023ರ ಗುರುವಾರ ಬೆಳಿಗ್ಗೆ 11.30ಕ್ಕೆ ಸರಿಯಾಗಿ ಮೇಲ್ಕಂಡ ಕ್ಲಬ್‌ನ ವಾರ್ಷಿಕ ಮಹಾಸಭೆಯನ್ನು ಕ್ಲಬ್ ಆವರಣದಲ್ಲಿ ಅಧ್ಯಕ್ಷರಾದ ಶ್ರೀ ಎ.ಬಿ. ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತದೆ. ಆದ್ದರಿಂದ ಕ್ಲಬ್‌ನ ಸದಸ್ಯರುಗಳು ಸಕಾಲಕ್ಕೆ ಆಗಮಿಸಬೇಕಾಗಿ ಈ ಮೂಲಕ ಕೋರಲಾಗಿದೆ.

**ಆಡಳಿತ ಮಂಡಳಿ ಪರವಾಗಿ**
**(ರವಿಶಂಕರ್ ಪಲ್ಲಾಗಟ್ಟಿ) ಗೌರವ ಕಾರ್ಯದರ್ಶಿಗಳು**

### ಮಾನ್ಯ ಸದಸ್ಯರುಗಳ ಗಮನಕ್ಕೆ

ದಿನಾಂಕ 15.10.2023ನೇ ಭಾನುವಾರದಂದು ನಡೆಯಲಿರುವ 2023-24, 2024-25 ಮತ್ತು 2025-26ನೇ ಸಾಲುಗಳ ಅವಧಿಯ ಆಡಳಿತ ಮಂಡಳಿಯ ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸುವ/ ಸೂಚಿಸುವ/ಅನುಮೋದಿಸುವ ಸದಸ್ಯರುಗಳು ಕ್ಲಬ್‌ಗೆ ಪಾವತಿಸಬೇಕಾದ ನಿರ್ವಹಣಾ ವೆಚ್ಚವನ್ನು **(2022-23ನೇ ಸಾಲಿನವರೆಗೆ)** ದಿನಾಂಕ: 28.9.2023 ರೊಳಗಾಗಿ ಪಾವತಿಸಲು ಕೋರಿದೆ. ತಪ್ಪಿದ್ದಲ್ಲಿ ಬೈಲಾ ಪ್ರಕಾರ ಚುನಾವಣೆಗೆ ಸ್ಪರ್ಧಿಸಲು/ ಸೂಚಿಸಲು, ಅನುಮೋದಿಸಲು ಅವಕಾಶವಿರುವುದಿಲ್ಲ.

**ಆಡಳಿತ ಮಂಡಳಿ ಪರವಾಗಿ**
**(ರವಿಶಂಕರ್ ಪಲ್ಲಾಗಟ್ಟಿ) ಗೌರವ ಕಾರ್ಯದರ್ಶಿಗಳು**

# ಶ್ರೀ ಸುಪಾರ್ಶ್ವನಾಥ ಜೈನ್ ಮೈನಾರಿಟಿ ಸಹಕಾರಿ ವಾರ್ಷಿಕ ಸಭೆ



ದಾವಣಗೆರೆ, ಸೆ. 27- ಶ್ರೀ ಸುಪಾರ್ಶ್ವನಾಥ ಜೈನ್ ಮೈನಾರಿಟಿ ಸೌಹಾರ್ದ ಸಹಕಾರಿ ನಿಯಮಿತದ ಆರನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ನಗರದ ಕಾಯಿಪೇಟೆಯ ಶ್ರೀ ಸಂಕೇಶ್ವರ ಪಾರ್ಶ್ವ ರಾಜೇಂದ್ರ ಭವನದಲ್ಲಿ ನಡೆಯಿತು.

ಸಹಕಾರಿಯ ಅಧ್ಯಕ್ಷ ಸಂಘವಿ ಮಹಾವೀರ ಜೈನ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಹೊಸದಾಗಿ ಬಾಲ್ ಬಚತ್ ಯೋಜನೆಯ ಬಗ್ಗೆ ಸಭೆಗೆ ತಿಳಿಸಿಕೊಟ್ಟರು.

ಈ ಯೋಜನೆಯಲ್ಲಿ ಮಕ್ಕಳಲ್ಲಿ ಉಳಿತಾಯ ಮನೋಭಾವನೆ ಬೆಳೆಸಲು ಒಂದು ವಿಶಿಷ್ಟ ಮತ್ತು ವಿನೂತನ ಯೋಜನೆ ಜಾರಿಗೆ ತರಲಾಗಿದೆ ಎಂದು ತಿಳಿಸಿದರು.

2022-23ನೇ ಸಾಲಿನಲ್ಲಿ ತಮ್ಮ ಸೌಹಾರ್ದ ಸಹಕಾರಿ 9 ಲಕ್ಷ ರೂ. ಲಾಭ ಗಳಿಸಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಪೂನಂ ಚಂದ್‌ಜಿ, ಎಂ.ಆರ್. ಪ್ರಭುದೇವ, ಹೆಚ್.ಎಂ. ನಾಗರಾಜ್, ಎನ್.ಜಿ. ಗಿರೀಶ್ ನಾಡಿಗ್, ಎಸ್. ಶಶಿಕುಮಾರ್ ಭಾಗವಹಿಸಿ ಮಾತನಾಡಿದರು.

ಕುಂದನ್ ಸ್ವಾಗತಿಸಿದರು. ಪೂಲ್‌ಚಂದ್ ಅಂಬಾಲಾಲ್ ಕಳೆದ ಸಾಲಿನ ನಡಾವಳಿ ಓದಿದರು. ಅಶೋಕ್‌ಕುಮಾರ್ ಜೈನ್ ಲೆಕ್ಕ ಪರಿಶೋಧನಾ ವರದಿ ಮಂಡಿಸಿದರು.

ಆರ್. ರಾಜೇಂದ್ರ ಪ್ರಸಾದ್ ಅನುಪಾಲನ ವರದಿ ಮಂಡಿಸಿದರು. ದಿವ್ಯ ಎಸ್. ಜೈನ್ ನಿರೂಪಿಸಿದರು. ಜಯಚಂದ್ ಜಿ ವಂದಿಸಿದರು.

## ರಂಭಾಪುರಿ ಪೀಠದಲ್ಲಿ ನಾಳೆ ಶ್ರೀ ವೀರಭದ್ರೇಶ್ವರ ಜಯಂತ್ಯುತ್ಸವ

ಬಾಳೆಹೊನ್ನೂರು, ಸೆ. 27- ಬಾಳೆಹೊನ್ನೂರಿನ ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದಲ್ಲಿ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಾಡಿದ್ದು ದಿನಾಂಕ 29 ರ ಶುಕ್ರವಾರ ಬೆಳಿಗ್ಗೆ ಶ್ರೀ ವೀರಭದ್ರೇಶ್ವರ ಸ್ವಾಮಿ ಜಯಂತ್ಯುತ್ಸವ ಹಮ್ಮಿಕೊಳ್ಳಲಾಗಿದೆ.

ಅಖಿಲ ಕರ್ನಾಟಕ ವೀರಶೈವ ಅರ್ಚಕ ಪುರೋಹಿತರ ನಿಸ್ವಾರ್ಥ ಸೇವಾ ಸಂಘದ ವತಿಯಿಂದ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಮಠಾಧೀಶರು ಭಾಗವಹಿಸಲಿದ್ದಾರೆ.

## ಅಂಬಾಭವಾನಿ ಬ್ಯಾಂಕ್ ವೃತ್ತಿಪರ ನಿರ್ದೇಶಕರಾಗಿ ರಾಜು ಮಹೇಂದ್ರಕರ್



ದಾವಣಗೆರೆ, ಸೆ. 27 - ನಗರದ ಶ್ರೀ ಅಂಬಾ ಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ವೃತ್ತಿಪರ ನಿರ್ದೇಶಕರಾಗಿ ಚಾರ್ಟರ್ಡ್ ಅಕೌಂಟೆಂಟ್ ರಾಜು ಮಹೇಂದ್ರಕರ್ ವಿ. ನೇಮಕಗೊಂಡಿದ್ದಾರೆ.

ಬ್ಯಾಂಕಿನ ಸಭಾಂಗಣದಲ್ಲಿ ಕಳೆದ ವಾರ ನಡೆದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ಈ ನೇಮಕ ಮಾಡಲಾಯಿತು ಎಂದು ಬ್ಯಾಂಕಿನ ಅಧ್ಯಕ್ಷ ಗೋಪಾಲರಾವ್ ಮಾನೆ ತಿಳಿಸಿದ್ದಾರೆ.





